ನಮ್ಮ ಸಾಂಸ್ಕೃತಿಕ ಚಿಂತಕರು

ಕುಂಚ ಕಲೆಯ ಸಂತ
ಶ್ರೀ ಚ.ಭೀ. ಸೋಮಶೆಟ್ಟಿ





ಲೇಖಕರು :
ನಿಂಗದಳ್ಳಿ ಮಲ್ಲಿಕಾರ್ಜುನ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ.
Email : kasapabidar@gmail.com - www.kasapabidar.in





ಸ್ನೇಹ ಜೀವಿ ಶ್ರೀ. ನಿಂಗದಳ್ಳಿ ಮಲ್ಲಿಕಾರ್ಜುನ ನಮ್ಮ ಮಧ್ಯದ ಸರಳ ಸ್ವಭಾವದ ವ್ಯಕ್ತಿ, ಇವರದು ಮೂಲತಃ ಕಲಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ ನಿಂಗದಳ್ಳಿ ಗ್ರಾಮ. ಇವರು ಸದ್ಗೃಹಸ್ತರಾದ ಶ್ರೀಮತಿ ಮಹಾದೇವಿ ಮತ್ತು ಶ್ರೀ. ಗುರುಶಾಂತಪ್ಪ ಅವರ ಮೊದಲನೇ ಮಗನಾಗಿ ೦೩-೦೧-೧೯೮೧ ಜನಿಸಿದರು. ತಂದೆಯವರ ನೌಕರಿಯಿಂದಾಗಿ ಬೀದರನಲ್ಲಿ ನೆಲೆಸಿರುವರು. ತಂದೆಯವರು ನಿವೃತ್ತಿಯ ನಂತರವು ಇಲ್ಲಿಯೆ ನೆಲೆಸಿ, ಶ್ರೀಮತಿ ರೇಖಾ ಅವರ ಬಾಳ ಸಾಂಗತ್ಯದಲ್ಲಿ ಮಗಳು ಚಿನ್ಮಯಿ ಮತ್ತು ಮಗ ಪ್ರಬುದ್ಧ ಮಕ್ಕಳನ್ನು ಪಡೆದು ತುಂಬು ಸಂಸಾರ ನಡೆಸುತಿದ್ದಾರೆ.

ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, ಕೃಷಿ ವಿಷಯದಲ್ಲಿ ಸ್ನಾತಕೊತ್ತರ ಪದವಿ ಪಡೆದ ನಂತರ ತೋಟಗಾರಿಕೆ ಇಲಾಖೆಯಲ್ಲಿ ಕ್ಷೇತ್ರ ಮಟ್ಟದ ಸಮಾಲೋಚಕರಾಗಿ ವೃತ್ತಿ ಜೀವನ ಆರಂಭಿಸಿದರು. ಒಂದು ವರ್ಷಗಳ ಸೇವೆ ನಂತರ ಕೃಷಿ ಇಲಾಖೆಯಲ್ಲಿ ಕೃಷಿ ಅಧಿಕಾರಿಗಳಾಗಿ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿ ಸದ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಅಧೀನದಲ್ಲಿರುವ ಕೃಷಿ ವಿಜ್ಞಾನ ಕೇಂದ್ರ ಬೀದರಲ್ಲಿ ೨೦೧೧ ರಿಂದ ತೋಟಗಾರಿಕೆ ವಿಜ್ಞಾನಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ರೈತರಿಗೆ ತೋಟಗಾರಿಕೆ ತಂತ್ರಜ್ಞಾನಗಳ ಪರಿಚಯ ಮತ್ತು ಅವುಗಳನ್ನು ರೈತರು ಕ್ಷೇತ್ರ ಮಟ್ಟದಲ್ಲಿ ಅನುಷ್ಠಾಗೊಳಿಸಲು ಪೂರಕವಾಗುವಂತೆ ಅನೇಕ ಕೃಷಿ– ತೋಟಗಾರಿಕೆಯ ತಾಂತ್ರಿಕತೆಗಳ ಕುರಿತಾದ ಲೇಖನ ಮತ್ತು ಕವನಗಳನ್ನು ರಚಿಸುತ್ತಾ ಸಾಹಿತ್ಯದಲ್ಲಿ ಕೃಷಿ ಮಾಡುವ ಹವ್ಯಾಸ ಬೆಳಸಿಕೊಂಡಿದ್ದಾರೆ. ಕೃಷಿ ವಿಜ್ಞಾನ ಕೇಂದ್ರ, ಬೀದರನಲ್ಲಿ ಜರುಗಿದ ಕೃಷಿ ಮೇಳದ ಅಂಗವಾಗಿ 'ಕೃಷಿ ಕವನ ಗೋಷ್ಠಿಗಳನ್ನು' ಆಯೋಜಿಸಿ ಯಶಸ್ವಿಗೊಳಿಸಿದ್ದಾರೆ. ಇವರು ರಚಿಸಿರುವ ತಾಂತ್ರಿಕ ಲೇಖನ ಹಾಗು ರೈತರ ಯಶೋಗಾಥೆಗಳು ನಾಡಿನ ಪ್ರಮುಖ ಕೃಷಿ ಮಾಸಿಕ ಹಾಗು ಪ್ರಸಿದ್ಧ ದಿನಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಉಳ್ಳಾಗಡ್ಡಿ – ಸುಧಾರಿತ ಕೃಷಿ' ಸಹಲೇಖಕರಾಗಿ ರಚಿಸಿರುವ ಚೊಚ್ಚಲ ಕೃತಿ. ಕೃಷಿ ಕವನ ಸಿರಿ ಮತ್ತು ಕೃಷಿ ಕವನ ಸಂಪದ ಎಂಬ ಎರಡು ಕವನ ಸಂಕಲನಗಳನ್ನೂ ಸಂಪಾದಿಸಿದ್ದಾರೆ. ಗ್ರಾಮಿಣ ಜನರು ರೂಢಿ ಮಾಡಿಕೊಂಡಿದ್ದ ಬೀಜ ಸಂಗ್ರಹಣಾ ಪುರಾತನ ವಿಧಾನಗಳ ಮಾಹಿತಿ ಕಲೆ ಹಾಕಿ "ಧಾನ್ಯ ಸಂರಕ್ಷಣಾ ವಿಧಾನ– ಒಂದು ಅವಲೋಕನ"ಎಂಬ ಕಿರು ಹೊತ್ತಿಗೆಯನ್ನು ತಮ್ಮ ಹಿರಿಯರ ಸಹಯೋಗದಲ್ಲಿ ರಚಿಸಿದ್ದಾರೆ. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಿಂದ ಪ್ರಕಾಶಿತವಾಗುವ 'ಕೃಷಿ ಪ್ರದೀಪಿಕೆ' ಎಂಬ ತ್ರೈಮಾಸಿಕ ಪತ್ರಿಕೆಯ ಸಹ–ಸಂಪಾದಕರಾಗಿ ಕೆಲ ಅವಧಿ ಸೇವೆ ಸಲ್ಲಿಸಿರುತ್ತಾರೆ. ಕೃಷಿ ಡಿಪ್ಲೋಮಾ ಮತ್ತು ಕೃಷಿ ಪದವಿಧರರಿಗೆ ಪಾಠ ಹಾಗೂ ರೈತರ ಒಡನಾಟದ ವೃತ್ತಿಯೊಂದಿಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪರಿಶಿಷ್ಠ ಜಾತಿ ಪ್ರತಿನಿಧಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಾಹಿತ್ಯದ ಆಭಿರುಚಿವುಳ್ಳ ಕಾರಣ ಇದೀಗ ಕುಂಚ ಕಲೆಯ ಸಂತ ಶ್ರೀ ಚ.ಭೀ. ಸೋಮಶೆಟ್ಟಿಯವರ ಜೀವನ ಸಾಧನೆ ಕೃತಿ ರಚಿಸಿದ್ದು ಇವರಿಂದ ಇನ್ನೂ ಹೆಚ್ಚಿನ ಕೃತಿಗಳು ಹೊರಬರಲೆಂದು ಶುಭಹಾರೈಸುವೆ.

– ಪ್ರೊ. ಜಗನ್ನಾಥ ಕಮಲಾಪುರೆ

ಬೀದರ ಜಿಲ್ಲಾ ೧೭ನೇ ಕನ್ನಡ ಸಾಹಿತ್ಯ ಸಮ್ಮೇಳನ ನಿಮಿತ್ತ
ಸಾಂಸ್ಕೃತಿಕ ಚಿಂತಕರು ಮಾಲಿಕೆ

ಕುಂಚ ಕಲೆಯ ಸಂತ

ಶ್ರೀ ಚ.ಭೀ. ಸೋಮಶೆಟ್ಟಿ

ಲೇಖಕರು
ನಿಂಗದಳ್ಳಿ ಮಲ್ಲಿಕಾರ್ಜುನ
ಬೀದರ

ಪ್ರಕಾಶಕರು
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ
೨೦೨೦

ಕುಂಚ ಕಲೆಯ ಸಂತ – ಶ್ರೀ ಚ.ಭೀ. ಸೋಮಶೆಟ್ಟಿ
ಲೇ: ನಿಂಗದಳ್ಳಿ ಮಲ್ಲಿಕಾರ್ಜುನ, ಮ.ನಂ. ೧೭–೪–೨೨೫, ಶರಣ ಸಾಗರ, ಮಹೇಶ ನಗರ, ಮನ್ನಳ್ಳಿ ರಸ್ತೆ, ಬೀದರ–೫೮೫೪೦೩
ಮೊ. ೯೯೮೦೧೦೨೭೨೭
ಪ್ರಕಾಶಕರು ಃ **ಸುರೇಶ ಚನಶೆಟ್ಟಿ,**
ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ. ಮೊ: ೯೯೮೬೭೯೨೩೨೩
E-mail:kasapabidar@gmail.com, web: www.kasapabidar.in
ಪ್ರಥಮ ಮುದ್ರಣ ಃ ೨೦೨೦
ಹಕ್ಕುಗಳು ಃ ಲೇಖಕರದ್ದು
ಪುಟಗಳು ಃ ೬೪
ಬೆಲೆ ಃ ೧೦೦/–
ಅಕ್ಷರ ಜೋಡಣೆ ಃ ಪಾಟೀಲ ಕಂಪ್ಯೂಟರ್ಸ್, ಬೀದರ.
ಪುಸ್ತಕ ವಿನ್ಯಾಸ ಃ ಆರ್.ವ್ಹಿ. ಕುಂಬಾರ, ಬೀದರ.
ಮುಖಪುಟ ವಿನ್ಯಾಸ ಃ ಅಕ್ಷಯ ಗ್ರಾಫಿಕ್ಸ್, ಬೀದರ
ಮುದ್ರಕರುಃ ವಿಶ್ವಾಸ ಪ್ರೆಸ್ ಬೆಂಗಳೂರು

ವಿ.ಸೂ. : ಈ ಕೃತಿಯಲ್ಲಿ ಬರುವ ಅಭಿಪ್ರಾಯಗಳು ಹಾಗೂ ವಿವರಗಳು ಲೇಖಕರಿಗೆ ಸಂಬಂಧಿಸಿದವುಗಳಾಗಿರುತ್ತವೆ. –ಪ್ರಕಾಶಕರು

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬೀದರ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಸುರೇಶ ಚನಶೆಟ್ಟಿ

ಗೌರವಾಧ್ಯಕ್ಷರು
ಪಂಚಾಕ್ಷರಿ ಪುಣ್ಯಶೆಟ್ಟಿ

ಗೌರವ ಕಾರ್ಯದರ್ಶಿ
ಡಾ.ಬಸವರಾಜ ಬಲ್ಲೂರ
ಡಾ. ರಾಜಕುಮಾರ ಹೆಬ್ಬಾಳೆ

ಗೌರವ ಕೋಶಾಧ್ಯಕ್ಷರು
ಟಿ.ಎಂ.ಮಚ್ಚೆ

ಉಪಾಧ್ಯಕ್ಷರು
ಜಯದೇವಿ ಯದಲಾಪೂರೆ
ವಿಜಯಕುಮಾರ ಗೌರೆ,
ವಿರುಪಾಕ್ಷ ಗಾದಗಿ

ಮಹಿಳಾ ಪ್ರತಿನಿಧಿ
ಕಸ್ತೂರಿ ಪಟಪಳ್ಳಿ

ಮಹಿಳಾ ಸಾಹಿತಿ
ಮೇನಕಾ ಪಾಟೀಲ

ಮಹಿಳಾ ಘಟಕ ಅಧ್ಯಕ್ಷರು
ಜಯಶ್ರೀ ಸುಕಾಲೆ

ಮಕ್ಕಳ ಘಟಕ ಅಧ್ಯಕ್ಷರು
ರಜಿಯಾ ಬಳಬಟ್ಟಿ

ಪರಿಶಿಷ್ಟ ಜಾತಿ ಪ್ರತಿನಿಧಿ
ಡಾ.ಮಲ್ಲಿಕಾರ್ಜುನ ನಿಂಗದಳ್ಳಿ

ಪರಿಶಿಷ್ಟ ಪಂಗಡ ಪ್ರತಿನಿಧಿ
ಡಾ. ರಾಜಕುಮಾರ ಅಲ್ಲೂರೆ

ಸಂಘ ಸಂಸ್ಥೆ ಪ್ರತಿನಿಧಿ
ಸುಬ್ರಹ್ಮಣ್ಯ ಪ್ರಭು

ಜಿಲ್ಲಾ ವಾರ್ತಾಧಿಕಾರಿ
ಗವಿಸಿದ್ದಪ್ಪ ಹೊಸಮನಿ

ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು
ಸಿದ್ರಾಮ ಸಿಂಧೆ

ನಿಕಟಪೂರ್ವ ಅಧ್ಯಕ್ಷರು
ಪ್ರೊ. ಸಿದ್ರಾಮಪ್ಪ ಮಾಸಿಮಾಡೆ

ಜಿಲ್ಲಾ ಶಿಕ್ಷಣಾಧಿಕಾರಿ
ಶಿವಕುಮಾರ ಸ್ವಾಮಿ

ಗಡಿ ಪ್ರತಿನಿಧಿ
ಪ್ರೊ. ಶಿವಕುಮಾರ ಕಟ್ಟೆ
ವಸಂತ ಹುನಸನಾಳೆ,

ಅಧ್ಯಕ್ಷರು
ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು
ಎಂ. ಎಸ್. ಮನೋಹರ, ಬೀದರ
ಜಗನ್ನಾಥ ಮೂಲಗೆ, ಔರಾದ
ಸಚ್ಚಿದಾನಂದ ಮಠಪತಿ, ಹುಮನಾಬಾದ
ಡಾ. ರುದ್ರಮಣಿ ಮಠಪತಿ, ಬಸವಕಲ್ಯಾಣ
ಶಶಿಧರ ಕೊಸಂಬೆ ಭಾಲ್ಕಿ
ಪ್ರಶಾಂತ ಮಠಪತಿ ಕಮಾಲನಗರ
ಡಾ. ಶಿವಲೀಲಾ ಮಠಪತಿ, ಹುಲಸೂರ
ಅನಿಲಕುಮಾರ ಸಿಂಧೆ, ಚಿಟಗುಪ್ಪ

ಸಂಘಟನಾ ಕಾರ್ಯದರ್ಶಿ
ಉಮಾಕಾಂತ ವಾರದ,
ಶಾಂತಲಿಂಗ ಮಠಪತಿ
ವೀರಶೆಟ್ಟಿ ಪಟ್ನೆ

ಸಂಚಾಲಕರು
ಶಿವಶಂಕರ ಟೋಕರೆ

ಗೌರವ ಸಲಹೆಗಾರರು
ಕಾಶೆಪ್ಪಾ ಬಾಲಕಿಲೆ
ಶರಣಪ್ಪಾ ಮಿಠಾರೆ
ವೈಜಿನಾಥ ಕಮಠಾಣೆ
ಬಸವರಾಜ ಧನ್ನೂರ
ಪ್ರೊ. ಎಸ್. ವಿ. ಕಲ್ಮಠ
ಝೂಕೀರ ಹುಸೇನ್
ಡಾ.ಜಗನ್ನಾಥ ಹೆಬ್ಬಾಳೆ
ಪ್ರೊ. ಶಂಭುಲಿಂಗ ಕಾಮಣ್ಣಾ
ಎಸ.ಎಮ್.ಜನವಾಡಕರ್
ಡಾ.ಮನ್ಮಥ ಡೋಳೆ
ಶಿವಯ್ಯಾ ಸ್ವಾಮಿ

ವಿಶೇಷ ಆಹ್ವಾನಿತರು
ರಾಜೆಂದ್ರಕುಮಾರ ಗಂದಗೆ
ಡಾ.ಸಿ ಆನಂದರಾವ
ಬಾಲಾಜಿ ಬಿರಾದಾರ
ಪಾಂಡುರಂಗ ಬೆಲ್ದಾರ್
ರವೀಂದ್ರ ರೆಡ್ಡಿ
ಸಿದ್ಧಾರೂಢ ಭಾಲ್ಕೆ
ಡಾ. ಬಂಡಯ್ಯಾ ಸ್ವಾಮಿ

ಕಾರ್ಯಕಾರಿ ಸದಸ್ಯರು
ಜಗನ್ನಾಥಕಮಲಾಪೂರೆ
ಯೋಗೇಶ ಮಠ
ಸಚೀನ ವಿಶ್ವಕರ್ಮ
ದೇವೆಂದ್ರ ಕರಂಜೆ
ಅನೀಲಕುಮಾರ ದೇಶಮುಖ
ಸಿದ್ದಾರೂಢ ಕಂದಗೂಳ
ಶಿವಾನಂದ ಪಾಟೀಲ
ಗಿರಿರಾಜ ವಾಲೆ
ಆನಂದ ಪಾಟೀಲ

ಮುನ್ನುಡಿ

ಸಾಹಿತ್ಯವು ಯಾವಾಗಲೂ ಒಂದು ವಿಶಿಷ್ಟ ಅನುಭವ ಪರಂಪರೆಯನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತದೆ. ಒಂದು ಕೃತಿಯನ್ನು ಓದುತ್ತಿದ್ದಂತೆ ಅದರ ಅನುಭವಗಳು ನಮ್ಮೊಳಗೆ ಸೇರಿಕೊಳ್ಳುತ್ತ, ಅಲ್ಲಿನ ಅನುಭವ ಸಾರ್ವತ್ರಿಕರಣಗೊಳ್ಳುತ್ತ ಹೋಗುತ್ತದೆ. ಸಾಹಿತ್ಯಕೃತಿ ನಮ್ಮನ್ನು ತಟ್ಟಬೇಕು ಎಂದರೆ ಅಲ್ಲಿನ ಅನುಭವಗಳು ಗಾಢವಾಗಿರಬೇಕು, ಅಲ್ಲಿನ ಸೃಜನಶೀಲತೆಯ ಸೆಲೆಗಳು ನಮ್ಮನ್ನು ಸೆಳೆಯುವಂತೆ ಇರಬೇಕು. ಆ ಕೃತಿ ತನ್ನ ಸುತ್ತಲಿನ ಜೀವನವನ್ನು, ಪರಿಕರಗಳನ್ನು ಒಳಗೊಂಡಿದ್ದಾಗ ಇದು ಸಾಧ್ಯವಾಗುತ್ತದೆ.

ತಲೆ ತಲಾಂತರಗಳಿಂದ ಕೆಲವರು ನಾಡು, ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿ, ಜಲ, ಜನ ಸಮುದಾಯವನ್ನು ತಮ್ಮದೇ ರೀತಿಯಲ್ಲಿ ಶ್ರೀಮಂತಗೊಳಿಸಲು ಶ್ರಮಿಸಿರುತ್ತಾರೆ. ಅವರ ಶ್ರಮ ಮುಂದಿನ ತಲೆಮಾರಿಗೆ ತಿಳಿಯದೇ ಹೋಗಬಾರದು. ಜನ ಸಮುದಾಯದ ಶ್ರೇಯಸ್ಸಿಗೆ ಅವರುಕೊಟ್ಟ ಕೊಡುಗೆಯನ್ನು ಜನ ನೆನಪಿಸಿಕೊಳ್ಳುವಂತೆ ಆಗಬೇಕು, ಹಾಗೆ ನೆನಪಿಸಿಕೊಂಡರೆ ಅದು ಒಂದು ಸಮುದಾಯದಲ್ಲಿ ಇರುವ, ಇರಬೇಕಾದ ಕೃತಜ್ಞತೆಯ ಕುರುಹು.

ಬೀದರ್ ಜಿಲ್ಲೆಯಲ್ಲಿ ಅಂಥ ಹಿರಿಯರ ಕೊಡುಗೆಯನ್ನು ದಾಖಲು ಮಾಡುವ ಕಾರ್ಯ ನಡೆದು ಅದು ಇದೀಗ ಕಾರ್ಯರೂಪಕ್ಕೆ ಬಂದಿರುವುದು ಶ್ಲಾಘನೀಯ ಕೆಲಸ. ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕದ ಅಧ್ಯಕ್ಷರಾದ ಶ್ರೀ ಸುರೇಶ ಚನಶೆಟ್ಟಿಯವರಿಗೆ ಇಂಥ ವಿಚಾರವೊಂದು ಹೊಳೆದು ಅದನ್ನು ಅವರು ಸ್ವಯಂಸ್ಫೂರ್ತಿಯಿಂದ ಕೈಗೆತ್ತಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ಅವರ ಜೀವಿತಾವಧಿಯಲ್ಲಿಯೇ ಅವರು ಪ್ರತಿಪಾದಿಸಿದ ಜೀವನಮೌಲ್ಯಗಳನ್ನು ಅಕ್ಷರರೂಪಕ್ಕೆ ಇಳಿಸಬೇಕು ಎಂದು ಅವರು ಒಂದು ಯೋಜನೆಯನ್ನೂ ರೂಪಿಸಿದರು.

ಅದಕ್ಕೆ ಪೂರಕವಾಗಿ 'ಸಾಂಸ್ಕೃತಿಕ ಚಿಂತಕರು' ಎಂಬ ಸರಣಿಯಲ್ಲಿ ೧೭ ಜನ ಸಾಧಕರನ್ನು ಕುರಿತು ಅಷ್ಟೇ ಸಂಖ್ಯೆಯ ಲೇಖಕಿಯರು ಕೃತಿ ರಚಿಸಿದ್ದಾರೆ. ಅದರ ಜೊತೆಗೆ ಜಿಲ್ಲೆಯಲ್ಲಿ 'ಕನ್ನಡ ಕಟ್ಟಿದವರು' ಕುರಿತ ಸರಣಿಯಲ್ಲಿ ೧೭ ಜನ ಸಾಧಕರ ಬಗೆಗೆ ಅಷ್ಟೇ ಸಂಖ್ಯೆಯ ಬರಹಗಾರರು ಕೃತಿಗಳನ್ನು ರಚಿಸಿದ್ದಾರೆ. ಇದೆಲ್ಲ ಆಗಿರುವುದು ಜಿಲ್ಲೆಯ ೧೭ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಂಗವಾಗಿ ಎಂಬುದು ಇಲ್ಲಿ ಉಲ್ಲೇಖನಾರ್ಹ.

ಇದು ಒಂದು ಅಪರೂಪದ ದಾಖಲೆಯ ಕಾರ್ಯ; ನಮ್ಮ ಸಮಾಜದ ಏಳಿಗೆಗೆ ದುಡಿದ ಮಹನೀಯರನ್ನು, ಮಹಿಳೆಯರನ್ನು ನೆನಪಿಸಿಕೊಳ್ಳುವ ಕಾರ್ಯ. ಆದರೆ, ಇದು ಕೇವಲ ಒಂದು ದಾಖಲೀಕರಣದ ಕೆಲಸ ಮಾತ್ರ ಅನಿಸದೇ ಆಸಕ್ತರು ಈ ಕೃತಿಗಳನ್ನು ಓದಿದರೆ ಬೀದರ್ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಹಾಗೂ ಪದಾಧಿಕಾರಿಗಳ ಕಾರ್ಯ ಸಾರ್ಥಕ ಎನಿಸುತ್ತದೆ. ಇದಕ್ಕಾಗಿ ದುಡಿದ ಎಲ್ಲರಿಗೂ ನನ್ನ ಅಭಿನಂದನೆಗಳು.

ನಾಡೋಜ ಡಾ. ಮನು ಬಳಿಗಾರ್
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಅಕ್ಷರ ಪ್ರೀತಿಯ ನುಡಿ
(ಪ್ರಕಾಶಕರ ಮಾತು)

ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆ ಹಾಗೂ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ.

ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ. ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ.

ಸಮಾಜೋಸಾಂಸ್ಕೃತಿಕ ಏಳಿಗೆಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಸಾಂಸ್ಕೃತಿಕ ಚಿಂತಕರು ಮಾಲಿಕೆ ಆರಂಭಿಸಲಾಗಿದ್ದು ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು.

ನಮ್ಮ ಮಧ್ಯದ ಉದಯೋನ್ಮುಖ ಸಾಹಿತಿಗಳಾದ **ಶ್ರೀ ನಿಂಗದಳ್ಳಿ ಮಲ್ಲಿಕಾರ್ಜುನ** ಅವರು ಬರೆದ **ಕುಂಚ ಕಲೆಯ ಸಂತ - ಶ್ರೀ ಚ.ಭೀ. ಸೋಮಶೆಟ್ಟಿ** ಜೀವನ ಸಾಧನೆ ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. **ಶ್ರೀ ಚ.ಭೀ. ಸೋಮಶೆಟ್ಟಿ** ಅವರು ಕಲಾ ಲೋಕದಲ್ಲಿ ಬಹುದೊಡ್ಡ ಕ್ರಾಂತಿ ಮಾಡಿರುವರು. ಬಸವ ತತ್ವವನ್ನು ನಿಜಾಚರಣೆಯಲ್ಲಿ ತಂದ ಶ್ರೀಯುತರ ಬದುಕು ಬರಹ ಕುರಿತ ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ. ಪ್ರಸ್ತುತ ಪುಸ್ತಕಕ್ಕೆ ಮೌಲಿಕ ಮುನ್ನುಡಿ ಬರೆದು ಕೃತಿಯ ಮೌಲ್ಯ ಹೆಚ್ಚಿಸಿದ ನಾಡೋಜ ಡಾ. ಮನು ಬಳಿಗಾರ ಅವರನ್ನು ತುಂಬು ಹೃದಯದಿಂದ ನೆನೆಯುತ್ತೇವೆ. ಈ ಕೃತಿಯನ್ನು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಲು ಅನುಮತಿ ನೀಡಿರುವ ಲೇಖಕರಿಗೂ ಮತ್ತು **ಶ್ರೀ ಚ.ಭೀ. ಸೋಮಶೆಟ್ಟಿ** ಅವರಿಗೂ ವಿಶೇಷವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೂ ವಂದನೆಗಳು.

ಸುರೇಶ ಚನಶೆಟ್ಟಿ
ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ

ಸಾಂಸ್ಕೃತಿಕ ಚಿಂತಕರು

ಹಿಂದಣ ಹೆಜ್ಜೆಯನರಿತಲ್ಲದೆನಿಂದ ಹೆಜ್ಜೆಯನರಿಯಬಾರದೆಂಬ ಅಲ್ಲಮ ಪ್ರಭುದೇವರ ಮಾತು ಇತಿಹಾಸದ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ. ಇತಿಹಾಸವೆಂದರೆ ಕೇವಲ ರಾಜ ಮಹಾರಾಜರ ವೈಭವದ ಬದುಕು, ಕೋಟೆ ಕೊತ್ತಲಗಳೇ ಅಲ್ಲ, ರಾಜ ಪರಿವಾರದ ಪರಿಸರ, ಅರಸರ ಸುತ್ತಲಿನ ಜನ ಸಾಮಾನ್ಯರ ಬದುಕಿನ ಏಳುಬೀಳುಗಳು, ಸಮಕಾಲೀನ, ಕಲೆ, ಸಾಹಿತ್ಯ, ಸಂಸ್ಕೃತಿ ಅವುಗಳ ಬೆಳವಣಿಗೆಗೆ ಪೂರಕವಾದ ಅಂಶಗಳೆಲ್ಲ ಸೇರಿ ಇತಿಹಾಸವಾಗುತ್ತದೆ. ಚಾರಿತ್ರಿಕವಾದ ಒಂದು ಕೋಟೆಗೆ ಎಷ್ಟು ಮಹತ್ವವೋ ಒಂದೂರಿನ ಹಳೆ ವಾಡೆ(ಘೂಡೆ)ಗಳಿಗೂ ಅಷ್ಟೇ ಮಹತ್ವವಿರುತ್ತದೆ. ಒಬ್ಬ ರಾಜ ರಾಣಿಗೆ ಇರುವಷ್ಟೆ ಮಹತ್ವ ಒಂದೂರಿನ ಜನಪರ ಕಾಳಜಿಯ ವ್ಯಕ್ತಿಗಳಿಗೂ ಇರುತ್ತದೆ. ಅಂಥ ಸಾಂಸ್ಕೃತಿಕ ವ್ಯಕ್ತಿಗಳ ಕಾರ್ಯ ಸಾಧನೆ ಕಾಲಗತಿಯಲ್ಲಿ ಮರೆಯಾಗಬಾರದೆಂಬ ಕಾರಣವಾಗಿ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿ ಸಮಾಜಕ್ಕೆ ಬೆಳಕಾದ ಸಾಧಕರ ಜೀವನ ಸಾಧನೆ ದಾಖಲಿಸಬೇಕಾಗಿರುವುದು ಪ್ರಜ್ಞಾವಂತ ಸಮಾಜದ ಹೊಣೆಗಾರಿಕೆ ಎಂದರಿತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ **ಸಾಂಸ್ಕೃತಿಕ ಚಿಂತಕರು ಮಾಲಿಕೆ** ಆರಂಭಿಸಿದೆ. ೧೭ನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ಮೊದಲ ಹಂತದಲ್ಲಿ ೧೭ ಪುಸ್ತಕ ಹೊರತರುವ ಉದ್ದೇಶದಿಂದ ಈ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಮುಂಬರುವ

ದಿನಗಳಲ್ಲಿ ಸ್ಥಳೀಯ ಎಲ್ಲ ಸಾಂಸ್ಕೃತಿಕ ಚಿಂತಕರ ಜೀವನ ಸಾಧನೆ ಕುರಿತ ಪುಸ್ತಕಗಳನ್ನು ಹೊರತರಲಾಗುವುದು. ಹಿತ್ತಲೆ ಗಿಡ ಮದ್ದಲ್ಲ, ತಮ್ಮ ತಮ್ಮ ನೆಲದಲ್ಲಿ ಸಾಧಕರಿಗೆ ಮನ್ನಣೆ ದೊರೆಯಲಾರದು ಎಂಬ ತೆಳು ಗ್ರಹಿಕೆಯ ಮಾತಿವೆ. ಅದನ್ನು ಹುಸಿಗೊಳಿಸಲು ಸಾಧಕರ ಜೀವನ ಚರಿತ್ರೆ ಈ ಯೋಜನೆ ರೂಪಿಸಲಾಗಿದೆ. ಸಾಮಾನ್ಯವಾಗಿ ಜೀವನ ಚರಿತ್ರೆಗಳು ವಿವರಗಳ ಕಟ್ಟಾಗಿರುತ್ತವೆ. ಆದರೆ ಈ ಮಾಲಿಕೆಯ ಕೃತಿಗಳು ಹಾಗಲ್ಲ. ನಮ್ಮೆಲ್ಲರ ಅಂತಃಶಕ್ತಿ, ಪ್ರೇರಣೆಯಾಗಿದ್ದು, ಸತ್ಯ, ದಕ್ಷತೆ, ಪ್ರಾಮಾಣಿಕತೆ, ಕಾಯಕ ನಿಷ್ಠೆ, ದಾಸೋಹ ಜೀವನ, ಸಮಯ ಪ್ರಜ್ಞೆ ಇವುಗಳಿಗೆ ವ್ಯಾಖ್ಯಾನ ಬರೆದಂತೆ ಬದುಕಿದವರ ಚರಿತ್ರೆಗಳನ್ನು ಆಯ್ದುಕೊಳ್ಳಲಾಗಿದೆ ಇದೊಂದು ಅಪರೂಪದ ಮಾಲಿಕೆ. ಈ ಪುಸ್ತಕಗಳಲ್ಲಿ ಏಕಕಾಲಕ್ಕೆ ಹಲವು ವ್ಯಕ್ತಿಗಳ ಸಂಬಂಧಗಳನ್ನು ಜೋಡಿಸುವ, ಸಮಕಾಲೀನ ಸಾಂಸ್ಕ್ರತಿಕ ಚಿಂತನೆಗಳನ್ನು ಸಂಕ್ಷಿಪ್ತವಾಗಿ ದಾಖಲಿಸುವ ಮೂಲಕ ಪರಿಪೂರ್ಣ ರೂಪದ ಜೀವನ ಚರಿತ್ರೆ ಕಟ್ಟಿಕೊಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಸಾಧಕರ ಕುರಿತು ಅಧ್ಯಯನ ಮಾಡುವವರಿಗೆ ಈ ಕೃತಿ ಮೂಲ ಆಕರವಾಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ.

– ಡಾ. ಬಸವರಾಜ ಬಲ್ಲೂರ

ಲೇಖಕರ ನುಡಿ

ಅವಕಾಶಗಳು ಸಮಯ ಸವಲತ್ತುಗಳನ್ನು ನೋಡಿ ಬರವುದಿಲ್ಲ. ಅಂಥದೆ ಸನ್ನಿವೇಶ ನನಗೂ ಎದುರಾಯಿತು. ಆತ್ಮೀಯ ಸ್ನೇಹಿತ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಸುರೇಶ ಚನ್ನಶೆಟ್ಟಿಯವರು ದೂರವಾಣಿ ಕರೆ ಮಾಡಿ ಒಂದು ಜವಾಬ್ದಾರಿ ನೀಡಿದರು. ಅದು ಕಲಾ ತಪಸ್ವಿಗಳಾದ ಶ್ರೀ ಚ.ಭೀ.ಸೋಮಶೆಟ್ಟಿಯವರ ಕುರಿತು ಮಾಹಿತಿ ಕಲೆ ಹಾಕಿ ಅದನ್ನು ಹೊತ್ತಿಗೆ ರೂಪದಲ್ಲಿ ಪ್ರಸ್ತುತ ಪಡೆಸುವ ಜವಾಬ್ದಾರಿ. ಸಂಕೋಚ ವೆನಿಸಿತು. ಕೇವಲ ಲೇಖನಗಳಿಗೆ ಮತ್ತು ಕವನಗಳಿಗೆ ಸೀಮಿತವಾದ ನನ್ನ ಸಾಹಿತ್ಯ ಕೃಷಿಯ ಎಲ್ಲೆ ದಾಟಿ ಗ್ರಂಥ ರಚಹಿಸುವ ಕೆಲಸ ನಿರ್ವಹಿಸಬಹುದೆಂಬ ವಿಶ್ವಾಸ ಮೂಡಿಸಿ ಕಾರ್ಯೋನ್ಮುಖ ಮಾಡಿಸಿದರು.

ಹೊತ್ತ ಜವಾಬ್ದಾರಿಯ ಮೊದಲ ಹೆಜ್ಜೆ, ನಾನು ಶ್ರೀ ಚ. ಭೀ.ಸೋಮಶೆಟ್ಟಿಯವರ ಮನೆಗೆ ಹೋಗಿ ವಿಷಯ ತಿಳಿಸಿದೆ. ಮಾಹಿತಿ ಮತ್ತು ಸಹಕಾರ ನೀಡಲು ಸಂತೋಷದಿಂದ ಒಪ್ಪಿದರು. ಮರುದಿನವೇ ಈ ಕಾರ್ಯಕ್ಕೆ ಬೇಕಾಗಿದ್ದ ಅವರ ಕುರಿತಾದ ಲೇಖನಗಳು, ಪತ್ರಿಕಾ ವರದಿಗಳು ಮತ್ತು ಪ್ರಮಾಣ ಪತ್ರಗಳು ಅಲ್ಲದೆ ಕಲಾ ವಿದ್ಯಾರ್ಥಿಗಳು ಅವರ ಕುರಿತು ಅಧ್ಯಯನ ಮಾಡಿ ಸಲ್ಲಿಸಿದ ವರದಿ ಪುಸ್ತಕ ಹಲವು ಆಕರಗಳನ್ನು ನನ್ನ ಕೈಗಿತ್ತರು.

ಬಾಲ್ಯದಿಂದಲೂ ಶ್ರೀಯುತರನ್ನು ನಾನು ತುಂಬಾ ಹತ್ತಿರದಿಂದ ನೋಡಿರುವ ಕಾರಣ, ಮಾಹಿತಿ ಸುಲಭವಾಗಿ ಮತ್ತು ಹೇರಳವಾಗಿ ದೊರಕಿತು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಸೂಚಿಸಿರುವ ವಿಧಾನದಲ್ಲಿ ಮಾಹಿತಿಯನ್ನು ನನ್ನದೆ ಪದಗಳಲ್ಲಿ ಜೋಡಿಸತೊಡಗಿದೆ. ಕಲಾವಿದರ ಕುರಿತು ಸಂಕ್ಷಿಪ್ತ ಅಭಿಪ್ರಾಯ ಬರೆದು ಕೊಡಲು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ, ಸಾಹಿತಿ ಡಾ.ಬಸವರಾಜ ಬಲ್ಲೂರ ಮತ್ತು ಕಲಾ ಶಿಕ್ಷಕರಾದ ಶ್ರೀ ಶ್ರೀಕಾಂತ ಬಿರಾದಾರರವರಿಗೆ ವಿನಂತಿಸಿದೆ. ತಕ್ಷಣ ಸರಳವಾಗಿ ಒಪ್ಪಿಕೊಂಡರು.

ಇನ್ನುಳಿದವರದ್ದು ಸೋಮಶೆಟ್ಟಿಯವರ ಮನೆಗೆ ಭೇಟಿ ನೀಡಿ ಕಲಾಕೃತಿ ವೀಕ್ಷಿಸಿ 'ಅಭಿಪ್ರಾಯ ಪುಸ್ತಕದಲ್ಲಿ' ಬರೆದಿಟ್ಟ ಸಾಲುಗಳನ್ನೂ ಬಳಸಿಕೊಂಡೆ.

ಹೀಗೆ ಅನುಭವದ ಕೊರತೆಯಲ್ಲು ಪ್ರಯತ್ನ ಮುಂದುವರೆಸಿದೆ. ಬರೆದ ಟಿಪ್ಪಣಿಗಳನ್ನು ನನ್ನ ತಂದೆಯವರಿಗೆ ತೋರಿಸುತ್ತಿದ್ದೆ.ತಂದೆಯವರು ನನಗೆ ಕೆಲಸಲಹೆಗಳುನೀಡಿದರು. ಹಲವು ಕಡೆ ತಿದ್ದಿ ಮತ್ತೊಮ್ಮೆ ಬರೆಸಿದರು. ಹೀಗೆ ಬಲ್ಲೂರ ಸರ್‌ರವರಿಗು ನಿರಂತರ ಸಲಹೆ ಕೇಳುತ್ತಿದ್ದೆ. ಅವರ ಬಿಡುವಿಲ್ಲ್ದ ಕೆಲಸದೊತ್ತಡದ ನಡುವೆ ಕೆಲ ಸೂಚನೆ ನೀಡಿದರು. ಹೀಗೆ ಮಾತನರಿಯದ ಕಂದ ಮೊದಲ ನುಡಿ ತೊದಲುತ್ತ ನುಡಿದಂತೆ, ನಾನು ಅಪಕ್ವಬರಹಗಾರನಾಗಿ ಆದರು ಪ್ರಯತ್ನ ಮಾಡಿದ್ದೇನೆ.

ಕಾರ್ಯ ಪೂರ್ಣಗೊಳ್ಳುವವರೆಗೂ ಸಾಥ್ ನೀಡಿದ ಸ್ನೇಹಿತ ರೇವಣಕುಮಾರ, ಯುವರಾಜ ಉಣ್ಣೆ, ಆದರ್ಶ ಕವಳಾಸ ಮತ್ತು ಮಹೇಶ ಮೊಳಕೇರಿ ಅವರಿಗೆ ಅಭಿನಂದಿಸಲೇಬೇಕು. ಅಚ್ಚುಕಟ್ಟಾಗಿ ಬೆರಳಚ್ಚು ಮಾಡಿ, ಅಕ್ಷರ ಜೋಡಣೆ ಮಾಡಿಕೊಟ್ಟ ಶ್ರೀ ನೂರಂದಪ್ಪಾ ಮೀನಕೇರಿ ಕಾಡವಾದ, ಬ್ರೀಮ್ಸ್ ವೈದ್ಯಕೀಯ ಕಾಲೇಜು ಬೀದರನಲ್ಲಿಸೇವೆ ಸಲ್ಲಿಸುತ್ತಿರುವ ಇವರಿಗೂಧನ್ಯವಾದಗಳು. ಕುಟುಂಬದ ಸದಸ್ಯರಿಗೂ ಹಾಗೂ ಈ ಕಾರ್ಯಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಸರ್ವರು ಸದಾ ಸ್ಮರ್ಣಾರ್ಹರು.

"Painting is silent poetry and poetry is painting that speaks"– ಇದು Plutarch ಅವರ ಮಹತ್ವದ ನುಡಿಯಂತೆ, ಜಿಲ್ಲೆಯ ಹಿರಿಯ ಚಿತ್ರ ಕಲಾಸಾಧಕರಾದ ಶ್ರೀ ಚಂದ್ರಶೇಖರ ಭೀಮಣ್ಣಪ್ಪಾ ಸೋಮಶೆಟ್ಟಿಯವರ ಕಲಾವೃತ್ತಿ ಬದುಕು ಮತ್ತು ಸಾಧನೆ ಕುರಿತು ಬರೆಯುವ ಈ ಕಾರ್ಯ ನನಗೊಪ್ಪಿಸಿ, ಪ್ರೇರೇಪಿಸಿದ ಯುವ ಉತ್ಸಾಹಿ ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಸುರೇಶ ಚನ್ನಶೆಟ್ಟಿಯವರಿಗೂ ಮತ್ತು ಇಂತಹ ಕಾರ್ಯಕ್ಕೆ ಅವಕಾಶ ನೀಡಿ, ಸಲಹೆ ಮತ್ತು ಮಾರ್ಗದರ್ಶನ ನೀಡಿ ಸಾಕಾರ ಮಾಡಿಕೊಟ್ಟ ಡಾ.ಬಸವರಾಜ ಬಲ್ಲೂರ ಅವರಿಗೂ ಹಾಗು ಸಮಸ್ತ ಬೀದರನ ಕ.ಸಾ.ಪ. ಬಳಗಗಕ್ಕೂ ಅನಂತ ಶರಣುಗಳು.

– ನಿಂಗದಳ್ಳಿ ಮಲ್ಲಿಕಾರ್ಜುನ, ಬೀದರ

ಕುಂಚ ಕಲೆಯ ಸಂತ

ಶ್ರೀ ಚ.ಭೀ. ಸೋಮಶೆಟ್ಟಿ

ಹಿನ್ನೆಲೆ :

ಒಂದು ನೆಲದ ಜನರ ವೈವಿದ್ಯಮಯ ಬದುಕು, ಅವರ ಕಾಯಕ, ಚಿಂತನೆ, ಅಭಿವ್ಯಕ್ತಿಯ ವಿಧಾನ ಮತ್ತು ಆಚರಣೆ ಹೀಗೆ ಒಟ್ಟು ಗೂಡಿ ಆ ನೆಲದ ಸಂಸ್ಕೃತಿ ರೂಪಿಸುತ್ತವೆ. ಹಾಗೆ ಸಂಸ್ಕೃತಿ ರೂಪುಗೊಳ್ಳುವಲ್ಲಿ ಅಲ್ಲಿಯ ನೈಸರ್ಗಿಕ ಸಂಪತ್ತು ಮತ್ತು ಹವಾಮಾನದ ಪಾತ್ರವೂ ಹಿರಿದಾಗಿರುತ್ತದೆ. ಆದ್ದರಿಂದ ಸಂಸ್ಕೃತಿ ಮತ್ತು ಪರಿಸರ ಅಲ್ಲಿದ್ದ ವ್ಯಕ್ತಿಗಳ ವ್ಯಕ್ತಿತ್ವ ನಿರ್ಮಾಣಕ್ಕೆ ಬುನಾದಿ ರೂಪಿಸುತ್ತವೆ. ವ್ಯಕ್ತಿ ತನ್ನಂತರಂಗದಲ್ಲಿ ಮೂಡುವ ಭಾವನೆ ಮತ್ತು ಚಿಂತನೆಗಳನ್ನು ಅಬಿವ್ಯಕ್ತ ಮಾಡಲಿಕ್ಕೆ ಒಂದು ಸೂಕ್ತ ಮಾಧ್ಯಮ ಅರಸುತ್ತಾನೆ. ಆಮಾದ್ಯಮವು ಅಕ್ಷರಗಳಾಗಿದ್ದರೆ ಸಾಹಿತ್ಯ ವೆನಿಸುತ್ತದೆ. ಕೆತ್ತನೆ–ಕುಸೂರಿಯಾಗಿದ್ದರೆ ಶಿಲ್ಪಕಲೆ ಎನಿಸುತ್ತದೆ. ವಾದ್ಯಗಳು ಮೇಳಗೊಂಡರೆ ಸಂಗೀತವೆನಿಸುತ್ತದೆ. ಒಂದು ವೇಳೆ ಅದು ರೇಖೆ – ವರ್ಣಗಳಾಗಿದ್ದಲ್ಲಿ ಚಿತ್ರಕಲೆಗಳಾಗುತ್ತವೆ. ಹೀಗೆ ಹಲವಾರು ಬಗೆ ಬಗೆಯ ಅಭಿವ್ಯಕ್ತಿಯ ವಾಹಿನಿಗಳು ಸಂಸ್ಕೃತಿಯ ಆಯಾಮಗಳಾಗುತ್ತವೆ. ಹೀಗೆ ಸುಸಂಸ್ಕೃತ ಸಮಾಜದಿಂದ ಉದಯಿಸಿದ ವ್ಯಕ್ತಿ ತನ್ನೊಳಗೆ ಕುಡಿಯೊಡೆದ ಪ್ರತಿಭೆಯ ಪಾಲು ನೀಡಿ ತನ್ಮೂಲಕ ಮತ್ತೆ ಆ ಸಂಸ್ಕೃತಿಯ ಸಿರಿತನ ವೃದ್ಧಿಸುತ್ತಾನೆ. ಈ ರೀತಿ ಒಕ್ಕಲುತನ, ಸಾಹಿತ್ಯ, ಚಿತ್ರಕಲೆ, ಜಾನಪದ,

ನಾಟಕ, ಕರಕುಶಲ ಪ್ರಾವಿಣ್ಯತೆ ಮತ್ತು ಬದುಕು ಸಾರ್ಥಕವೆನಿಸಿಕೊಡುವ ಆಧ್ಯಾತ್ಮಿಕತೆ ಈ ಎಲ್ಲ ವೈವಿದ್ಯತೆ ಹೊಂದಿರುವ ನಮ್ಮ ಪುಟ್ಟ ಜಿಲ್ಲೆ ಬೀದರ.

ಭೌಗೋಳಿಕವಾಗಿ ಕರುನಾಡಿನ ತುತ್ತ ತುದಿಯಲ್ಲಿರುವ ಬೀದರ ಜಿಲ್ಲೆ, ಅದು ತನ್ನದೆ ಆದ ಪರಂಪರೆ, ಕಲೆ, ಸಂಸ್ಕೃತಿಯ, ವಿಶೇಷತೆ ಹೊಂದಿದೆ. ಮಹಾರಾಷ್ಟ್ರ ಮತ್ತು ತೆಲಂಗಾಣ ರಾಜ್ಯಗಳೊಂದಿಗೆ ಗಡಿ ಹಂಚಿಕೊಂಡ ಬೀದರ ಜಿಲ್ಲೆ, ನೆರೆ ರಾಜ್ಯಗಳ ಸಂಸ್ಕೃತಿ ತನ್ನಲ್ಲಿ ಬೆರೆಸಿಕೊಂಡಿದೆ. ಗತ ಕಾಲದಿಂದಲೂ ಇಲ್ಲಿ ಅನೇಕರು ವಿವಿಧ ರಂಗಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಅವರ ಆಯ್ಕೆಯ ಕ್ಷೇತ್ರಗಳಲ್ಲಿ ಸಾಧನೆಗೈದಿದ್ದಾರೆ. ಸಾಧಕರಾಗಿ ತಾವೂ ಬೆಳೆದು, ತನ್ನ ಸುತ್ತವರನ್ನು ಬೆಳೆಸಿ ಜಿಲ್ಲೆಯುನ್ನು ಬೆಳಗಿಸುವ ದೀವಿಗೆಗಳಾಗಿದ್ದಾರೆ.ಅಂತಹ ವೈವಿದ್ಯಮಯ ಕ್ಷೇತ್ರದಲ್ಲಿ ಚಿತ್ರಕಲೆಯೂ ಒಂದು.

ಐತಿಹಾಸಿಕವಾಗಿ ಪ್ರಸ್ತಾವಿಸುವುದಾದರೆ **ಕ್ರಿ.ಶ. ೧೦೭೬-೧೧೨೬** ಅವಧಿಯಲ್ಲಿ ಕಲ್ಯಾಣದ ಚಾಳುಕ್ಯ ಚಕ್ರವರ್ತಿ ೬ನೇ ವಿಕ್ರಮಾದಿತ್ಯನ ಕಾಲದಲ್ಲಿ ಈ ಪ್ರದೇಶವು ಸಮೃದ್ಧವಾದ ಕಲೆಗಳ ತವರಾಗಿತ್ತು. ಸ್ವತಃ ವಿಕ್ರಮಾದಿತ್ಯನು ಕಲಾಸಕ್ತನಾಗಿದ್ದನು ಎಂಬ ಸಂಗತಿಗಳು ಅನೇಕ ಕಡೆ ಉಲ್ಲೇಖಗೊಂಡಿವೆ. ಬಸವಕಲ್ಯಾಣ, ಬೀದರ, ನಾರಾಯಣಪೂರ, ಶಿವಪೂರ, ಜಲಸಂಗ್ವಿ, ಗೋರ್ಟಾ ಮತ್ತು ಹುಮನಾಬಾದ ಮುಂತಾದ ಸ್ಥಳಗಳಲ್ಲಿ ಚಾಲುಕ್ಯರಿಂದ ನಿರ್ಮಾಣಗೊಂಡ ಮಂದಿರಗಳಿವೆ. ಜಲಸಂಗ್ವಿಯ ಕಲ್ಲೇಶ್ವರ ದೇವಸ್ಥಾನ ಅತಿ ಪ್ರಸಿದ್ಧ, ಈ ಮಂದಿರವು ಚಿಕ್ಕದಾದರೂ ಅಲ್ಲಿ ರೂಪಗೊಂಡು ಅರಳಿನಿಂತ ಕಲೆ ಅದ್ಭುತ. ಈ ನೆಲದಲ್ಲಿ ಬರಿ ಕೆತ್ತನೆಯ ಶಿಲ್ಪ ಕಲೆ ಅಷ್ಟೇ ಅಲ್ಲ, ವರ್ಣ ಚಿತ್ರಕಾರರಿಗೂ ಪ್ರೋತ್ಸಾಹವಿತ್ತು. ಈ ಸಂಗತಿಯ ನಿದರ್ಶನ ಶಿಲಾಬಾಲಕೆಯರ ಚಿತ್ರಗಳು ಬೀದರ ಕೋಟೆಯೊಳಗಿನ ಬೆರಗು ಮೂಡಿಸುವ ರಂಗಿನ ಮಹಲಿನ ಮೇಲ್ಛಾವಣಿಯ ಮೇಲೆ ಸಾಲು-ಸಾಲುಗಳಲ್ಲಿ ರಚಿತಗೊಂಡ ಆಕರ್ಷಕ ಚಿತ್ರಗಳು. ಚಿತ್ರಕಲೆಯಲ್ಲಿ ಬಳಕೆಯಾಗುವ ಬಣ್ಣಗಳ ತಯಾರಿಕೆಗೆ ಬೀದರ

ತಾಲೂಕಿನ ಕಮಠಾಣ ಗ್ರಾಮವು ಅಗ್ರಹಾರವಿತ್ತೆಂದು ಅಧ್ಯಯನ ಗ್ರಂಥಗಳಲ್ಲಿ ಉಲ್ಲೇಖವಾಗಿದೆ.

ಬಹಮನಿ ಸುಲ್ತಾನರ ಕಾಲದಲ್ಲಿ ಬೀದರ ಕೋಟೆಯಲ್ಲಿಯ ಮಹಲಗಳು, ಅರಮನೆ, ಮಸೀದಿಗಳು, ಸಭಾ ಭವನ ಮತ್ತು ನೃತ್ಯ ಮಂಟಪ ಇವು ಪರ್ಶಿಯನ್ ಕಲಾಕಾರರ ಕಲಾ ನೈಪುಣ್ಯದಿಂದ ಕಂಗೊಳಿಸುತ್ತಿವೆ. ಅಮೇರಿ ಬರೀದ್‌ಶಾಹಿ ಕಾಲದ ಕಟ್ಟಡಗಳಲ್ಲಿ ರಂಗೀನ್ ಮಹಲ್ ಅತ್ಯಂತ ಮನಮೋಹಕ. ಖಲೀಂ ಎಂಬ ಕಲಾವಿದನ ಕುಸುರಿ ಮತ್ತು ಗೋಡೆ ಚಿತ್ರಗಳು ವಿಶಿಷ್ಟ. ಹೀಗೆ ಬೀದರ ಜಿಲ್ಲೆಯು ವಾಸ್ತುಶಿಲ್ಪ, ಬಿದ್ರಿ ಕಲೆ ಜೊತೆಗೆ ಚಿತ್ರಕಲೆಗೂ ಆಶ್ರಯ ನೀಡಿದೆ. ಆಳರಸರ ಆಳ್ವಿಕೆಯ ಅವಧಿಯಲ್ಲಿ ಪುರಾತನ ಕಾಲದಿಂದ ಬೆಳೆದು ಬಂದ ಕಲೆ, ಚಿತ್ರಕಲೆ, ಶಿಲ್ಪಕಲೆ, ಸಾಹಿತ್ಯ ನಂತರದ ದಿನಗಳಲ್ಲಿ ಬೆಳವಣಿಗೆ ಕಾಣದೆ ಸ್ಥಗಿತಗೊಂಡಿರುವ ಅಂಶಗಳು ಇತಿಹಾಸ ದಾಖಲಿಸಿಕೊಂಡಿದೆ. ಕರ್ನಾಟಕ ಏಕೀಕರಣದ ನಂತರ ೧೯೫೬ರಲ್ಲಿ ಉದಯಿಸಿದ ಕರ್ನಾಟಕದಲ್ಲಿ ಮತ್ತೆ ಬೀದರ ಜಿಲ್ಲೆಯೊಳಗೆ ಸುಪ್ತಾವಸ್ಥೆಯಲ್ಲಿದ್ದ ಕಲೆ ನಿಧಾನವಾಗಿ ಅರಳಲಾರಂಭಿಸಿತು. ಹೊರ ಜಿಲ್ಲೆಯ ಕಲಾವಿದರ ಪ್ರಭಾವದಿಂದ ಜಿಲ್ಲೆಯ ಚಿತ್ರಕಲಾ ಪ್ರತಿಭೆಗಳಿಗೆ ಕಲಿಯುವ ಮತ್ತು ಬೆಳೆಯುವ ಅವಕಾಶ ಸಿಗತೊಡಗಿತು.

ಕಲಾವಿದ ಸೋಮಶೆಟ್ಟಿಯವರು :

ಕಲಾ ಋಷಿ ಶ್ರೀ ಎಸ್.ಎಂ. ಪಂಡಿತ್‌ರವರ ಕಲೆ ಅಮೋಘ. ಅವರ ಕಲಾ ಶೈಲಿಗೆ ಮನಸೋತು ಸ್ಫೂರ್ತಿಗೊಂಡು ಅವರ ಕಲಾ ಶೈಲಿ ಮತ್ತು ಕಲಾರಿತ್ಯದ ತಳಹದಿಯ ಮೇಲೆ ಕಲೆ ಸ್ವಾಯತ್ತ ಮಾಡಿಕೊಂಡು ಕಲಾವಿದರಾಗಿ ಬೆಳೆದವರು ನಾಡಿನಾದ್ಯಂತ ಅನೇಕರಿದ್ದಾರೆ. ಅಂಥವರ ಸಾಲಿನಲ್ಲಿ ನಮ್ಮ ಜಿಲ್ಲೆಯವರಾದ ಶ್ರೀ ಬಸವರಾಜ ಮುಗಳಿ, ಶಿವಾನಂದರು ಹಾಗೂ ಶ್ರೀ ಸೋಮಶೆಟ್ಟಿಯವರು ಪ್ರಮುಖರು. ಬಸವಾದಿ ಶರಣರ ಹಾಗೂ ಸಂತ ಮಹಾತ್ಮರುಗಳ ಚಿತ್ರಗಳನ್ನು ಬರೆದ ಈ ಕಲಾವಿದರು

ತಮ್ಮ ಕಲಾಕೃತಿಗಳ ಮುಖೇನ ಕಲಾ ಸೇವೆ ಸಲ್ಲಿಸಿರುತ್ತಾರೆ. ಹೀಗೆ ತಮ್ಮ ನಿರಾಯಾಸ ಸಾಧನೆ ಮತ್ತು ಕಲಾ ಸೇವೆಯಿಂದ ಬೀದರ ಜಿಲ್ಲೆಯ ಸುಪ್ರಸಿದ್ಧ ಕಲಾವಿದರ ಪಟ್ಟಿಯ ಅಗ್ರಶ್ರೇಣಿಯಲ್ಲಿ ನಿಂದವರು ಶ್ರೀಯುತ ಸೋಮಶೆಟ್ಟಿಯವರು.

ಶ್ರೀ ಚಂದ್ರಶೇಖರ ಇವರ ತಂದೆ ಶ್ರೀ ಭೀಮಣ್ಣಪ್ಪಾ ಭದ್ರಪ್ಪಾ ಸೋಮಶೆಟ್ಟಿಯವರು, ತಾಯಿ ಶ್ರೀಮತಿ ಕಾಶಮ್ಮ. ಇವರು ಮೂಲತ: ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ಹಳ್ಳಿಖೇಡ (ಬಿ) ಗ್ರಾಮದವರು. ಇವರದು ವ್ಯಾಪರಸ್ಥರ ಕುಟುಂಬ. ಅಂದಿನ ದಿನಗಳಲ್ಲಿ ವ್ಯಾಪರಕ್ಕಾಗಿ ಜಹೀರಾಬಾದ್‌ಗೆ ವಲಸೆ ಹೋಗಿದ್ದರು. ಅಂದು ಜಹೀರಾಬಾದ್ ಬೀದರ ಜಿಲ್ಲೆಗೆ ಒಳಪಟ್ಟಿತ್ತು. ಇವರದು ಮಧ್ಯಮ ವರ್ಗ. ಈ ದಂಪತಿಗಳಿಗೆ ೬ ಜನ ಗಂಡು ಮಕ್ಕಳು ಮತ್ತು ೩ ಜನ ಹೆಣ್ಣು ಮಕ್ಕಳು, ಹೀಗೆ ಒಟ್ಟು ೯ ಜನ ಮಕ್ಕಳ ದೊಡ್ಡ ಕುಟುಂಬ. ಮೊದಲನೆ ಮಗ ದಿ. ಗುರುಸಿದ್ಧಪ್ಪಾ ಶಿಕ್ಷಕರಾಗಿದ್ದರು. ಎರಡನೆಯವರು ದಿ.ಸಿದ್ರಾಮಪ್ಪ, ಬಿ.ವ್ಹಿ.ಬಿ ಕಾಲೇಜಿನಲ್ಲಿ ಗುಮಾಸ್ತರಾಗಿದ್ದರು. ನಂತರದಲ್ಲಿ ಶ್ರೀಮತಿ ಮಹಾದೇವಿ ಇವರು ಕೂಡಾ ಶಿಕ್ಷಕಿ, ಧಾರವಾಡದಲ್ಲಿ ನೆಲೆಸಿದ್ದಾರೆ. ಶ್ರೀಯುತ ಚಂದ್ರಶೇಖರ ರವರು ೪ನೇ ಸಂತಾನವಾಗಿ. ದಿನಾಂಕ ೦೭.೦೯.೧೯೪೮ರಲ್ಲಿ ಜನಿಸಿದರು. ಇವರ ನಂತರದಲ್ಲಿ ಜನಿಸಿದವರು ಶ್ರೀಮತಿ ಕಮಲಾ ಇವರು ಕೂಡಾ ಶಿಕ್ಷಕಿ, ಇವರು ಕೂಡಾ ಧಾರವಾಡದಲ್ಲಿ ನೆಲೆಸಿದ್ದಾರೆ. ಆರನೆ ಸಂತಾನವಾಗಿ ಶ್ರೀ ಶಿವಕುಮಾರ ಜನಿಸಿದರು. ಇವರು ಸೋಮಶೆಟ್ಟಿ ಮೆಡಿಕಲ್ಸ ಎಂಬ ಔಷಧ ಅಂಗಡಿ ನಡೆಸುತ್ತಿದಾರೆ. ನಂತರದಲ್ಲಿ ಜನಿಸಿದವರು ಶ್ರೀ.ಬಸವರಾಜ ಇವರು ಕೈಗರಿಕಾ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಎಂಟನೆಯವರು ದಿ. ವಿದ್ಯಾವತಿ ಇವರು ಬಿ.ಎ. ಬಿ.ಎಡ್ ಪದವಿಧರೆಯಾಗಿದ್ದರು. ಕೊನೆಯದಾಗಿ ಶ್ರಿ.ವಿಜಯಕುಮಾರ ಬ್ಯಾಂಕ ನೌಕರರಾದ ಇವರು ಸದ್ಯ ಔರಂಗಬಾದನಲ್ಲಿ ನೆಲೆಗೊಂಡಿದ್ದಾರೆ. ಹೀಗೆ ಇವರದು ಬಹು ದೊಡ್ಡ ಕುಟುಂಬ.

ಕಲಾವಿದರಾದ ಶ್ರೀ.ಚಂದ್ರಶೇಖರ ರವರು ಅವರ ಕಲಾಕೃತಿಗಳಿಗೆ ಚ.ಭೀ.ಸೋಮಶೆಟ್ಟಿ ಅಂಕಿತದಲ್ಲಿ ನಿರ್ಮಿಸುತ್ತಾರೆ. ಈಗ ಇವರು ನೆಲೆಸಿದ್ದು ಬೀದರನ ಬಸವ ನಗರ ಬಡಾವಣೆಯ ಸ್ವಗೃಹವಾದ **"ಕಲಾ ಕುಂಜ"**ದಲ್ಲಿ. ಕಲಾ ಶಿಕ್ಷಕರಾಗಿ ಬೀದರನ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಂಗ ಸಂಸ್ಥೆಯಾದ ಕರ್ನಾಟಕ ಪ್ರೌಢಶಾಲೆಯಲ್ಲಿ ಚಿತ್ರಕಲೆಯ ಶಿಕ್ಷಕರಾಗಿ ದಿ.೨೬.೦೬.೧೯೭೪ ರಿಂದ ದಿ.೩೦.೦೯.೨೦೦೬ರ ವರೆಗೆ ಸೇವೆ ಸಲ್ಲಿಸಿ ಸದ್ಯ ನಿವೃತ್ತಿ ಜೀವನ ನಡೆಸುತ್ತಿದ್ದಾರೆ. ಸೇವಾ ನಿವೃತ್ತಿಯ ನಂತರವೂ ತಮ್ಮನ್ನು ತಾವು ಚಿತ್ರಕಲಾ ಸಾಧನೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುತ್ತಾರೆ. ೭೦ರ ಇಳಿವಯಸ್ಸಿನಲ್ಲಿಯೂ ಚಿತ್ರಕಲೆಯೇ ಜೀವನವೆಂದು ಕಲೆಯನ್ನು ಆರಾಧನಾ ಭಾವದಿಂದ ಚಿತ್ರಕಲೆ ಮಾಡುತ್ತಲೆ ದಿನಗಳೆಯುತ್ತಿದ್ದಾರೆ. ತಮ್ಮ ಬದುಕನ್ನು ಚಿತ್ರಕಲೆಗೆ ಬೆಸೆದುಕೊಂಡಿರುವ ಇವರು ಹಿರಿದು ಕಿರಿದೆನ್ನದೆ ಕಲಾ ಸೇವೆಯನ್ನು ನಾನಾ ಪ್ರಕಾರಗಳಲ್ಲಿ ಸುಧೀರ್ಘವಾಗಿ ಮಾಡುತ್ತಾ ಬಂದು ಜಿಲ್ಲೆಯ ಹಿರಿಯ ಚಿತ್ರಕಲಾವಿದರಾಗಿ ಜನಮಾನಸದಲ್ಲಿ ನೆಲೆ ಮಾಡಿರುತ್ತಾರೆ.

ಇವರು ವಾಸಿಸುವ ಮನೆಗೆ **"ಕಲಾ ಕುಂಜ"** ವೆಂಬ ಹೆಸರಿಟ್ಟು ಮನೆಯನ್ನು ಕಲಾಕೃತಿಗಳಿಂದ ಕಲಾರಾಧನೆಯ ಕೇಂದ್ರವಾಗಿಸಿದ್ದಾರೆ. ಸಾಹಿತಿಗಳ ಮನೆಯೊಳಗೆ ಎಲ್ಲೆಲ್ಲಿಯೂ ಪುಸ್ತಕಗಳೆ ಹರಡಿರುವಂತೆ, ಇವರ ಮನೆಯಲ್ಲಿ ಎಲ್ಲೆಲ್ಲಿಯೂ ಚಿತ್ರಕಲಾ ಕೃತಿಗಳೆ ರಾರಾಜಿಸುತ್ತಿವೆ. ಇವರು ಚಿತ್ರ ಬಿಡಿಸುವ ಕೋಣೆಯು ಪೂಜಾ ಕೋಣೆಯಾಗಿದೆ.

ಬಾಲ್ಯ ಮತ್ತು ಶಿಕ್ಷಣ :

ಒಬ್ಬ ವ್ಯಕ್ತಿಯಲ್ಲಿ ಹುದುಗಿದ್ದ ಕಲೆ ಅಥವಾ ನೈಪುಣ್ಯತೆ ಚಿಗುರೊಡೆಯಲು ಅವನ ಮನೆಯ ಪರಿಸರ ಹಾಗೂ ಸುತ್ತಲಿನ ವಾತಾವರಣ ಬಹಳಷ್ಟು ಪಾತ್ರ ನಿರ್ವಹಿಸುತ್ತದೆ. ಪ್ರೋತ್ಸಾಹ ನೀಡುವ ವಾತಾವರಣದಲ್ಲಿ ಮಾತ್ರ ಪ್ರತಿಭೆ ಅರಳುತ್ತದೆ. ಪ್ರೋತ್ಸಾಹ ವಂಚಿತವಾದ

ಪ್ರತಿಭೆಗಳು ಅರಳುವ ಮುನ್ನವೆ ಕಮರಿ ಹೋಗುತ್ತವೆ. ಪ್ರತಿಭೆಗಳಿಗೆ ಪ್ರೋತ್ಸಾಹ ದೊರೆತಾಗ ಮಾತ್ರ ಬೆಳೆದು ಹೆಮ್ಮರವಾಗುತ್ತವೆ. ಹೀಗೆ ಕಲಾವನದಲ್ಲಿ ಹೆಮ್ಮರವಾಗಿ ಬೆಳೆದ ಸೋಮಶೆಟ್ಟಿಯವರಿಗೆ ಬಾಲ್ಯದಲ್ಲಿ ಚಿತ್ರಕಲೆಯತ್ತ ಸೆಳೆಯುವ ಮತ್ತು ಪ್ರೇರೆಪಿಸುವ ವಾತಾವರಣ ಮನೆಯಲ್ಲಿಯೇ ದೊರಕಿತು.

ಇವರ ತಂದೆ ಶ್ರೀ ಭೀಮಣಪ್ಪಾ ಸೋಮಶೆಟ್ಟಿಯವರು ಶರಣ ಸಂಸ್ಕೃತಿಯಲ್ಲಿ ಆಸಕ್ತಿಯುಳ್ಳವರಾಗಿದ್ದ ಕಾರಣ 'ಶರಣ ಸಂದೇಶ', 'ಶಿವಾನುಭವ' ಮತ್ತು 'ಆತ್ಮವಿಚಾರ' ಮೊದಲಾದ ಪತ್ರಿಕೆಗಳನ್ನು ಓದುತ್ತಿದ್ದರು. ಆ ಪತ್ರಿಕೆಗಳಲ್ಲಿ ಮೂಡಿ ಬರುತ್ತಿದ್ದ ಶರಣರ ಚಿತ್ರಗಳು ಬಾಲಕ ಚಂದ್ರಶೇಖರರಲ್ಲಿ ಚಿತ್ರ ಬರೆಯುವ ಆಸಕ್ತಿ ಮೂಡಿಸಿದವು ಇವರ ಆಸಕ್ತಿಗೆ ತಾಯಿ-ತಂದೆಯವರು ಪ್ರೋತ್ಸಾಹ ನೀಡುತ್ತಿದ್ದರು.

ಇವರ ಪ್ರಾಥಮಿಕ ವಿದ್ಯಾಬ್ಯಾಸ ಅಂದು ಕರ್ನಾಟಕಕ್ಕೆ ಸೇರಿದ ಜಹೀರಾಬಾದ್‌ನಲ್ಲಿ ಕನ್ನಡ ಮಾದ್ಯಮ ಶಾಲೆಯಲ್ಲಿ ಪೂರ್ಣಗೊಳಿಸಿದರು. ಚಂದ್ರಶೇಖರರು ಆಟೋಟಗಳಿಗಿಂತಲು ಚಿತ್ರ ಬಿಡಿಸುವದರಲ್ಲಿಯೇ ಹೆಚ್ಚು ಸಮಯ ವ್ಯಯಿಸುತ್ತಿದ್ದರು. ಇವರು ೪ನೇ ತರಗತಿ ತಲಪುವಷ್ಟರಲ್ಲಿ ರೇಖಾಚಿತ್ರ ಬಿಡಿಸುವ ಹವ್ಯಾಸ ಬಲಿಷ್ಠವಾಗತೊಡಗಿತು. ಮುಂದೆ ೫ನೇ ತರಗತಿಯಲ್ಲಿ ಚಿತ್ರಗಳಿಗೆ ಬಣ್ಣ ತುಂಬುವ ಕಲೆ ಚಿಗುರೊಡೆಯತೊಡಗಿತು. ಒಂದೊಮ್ಮೆ ಆ ಶಾಲೆಯ ವಾರ್ಷಿಕೋತ್ಸವದ ನಿಮಿತ್ತ ಅಲ್ಲಿನ ಮುಖ್ಯೋಪಾಧ್ಯಾಯರು ಹೊಸ ಪ್ರಯೋಗ ಮಾಡಿದರು. ಅದು, ಆ ದಿನದ ತರಗತಿಗಳನ್ನು ವಿದ್ಯಾರ್ಥಿಗಳೆ ನಡೆಸಿಕೊಡುವಂತೆ ಕಾರ್ಯಕ್ರಮ ರೂಪಿಸಿದರು. ಪ್ರತಿಯೊಂದು ವಿಷಯ ಬೋಧನೆಗೆ ಒಬ್ಬೊಬ್ಬ ವಿದ್ಯಾರ್ಥಿ ನೇಮಿಸಿದರು. ಅದರಲ್ಲಿ, ವಿದ್ಯಾರ್ಥಿ ಚಂದ್ರಶೇಖರವರ ಆಸಕ್ತಿಯ ವಿಷಯ ತಿಳಿದ ಶಿಕ್ಷಕರು ಇವರಿಗೆ ಚಿತ್ರಕಲಾ ವಿಷಯ ನೀಡಿದರು. ಆ ದಿವಸ ಶಾಲೆಯಸಂಪೂರ್ಣ ಕ್ಲಾಸ್‌ಗಳನ್ನು ವಿಧ್ಯಾರ್ಥಿಗಳೆ ನಡೆಸಿಕೊಟ್ಟರು. ಇವರದು ಪಾಠ ಹೇಳುವ ಸರದಿ ಬಂದಾಗ ಕ್ಲಾಸನಲ್ಲಿ ಚಿತ್ರ ಕಲೆ

ಹೇಳಲಾರಂಬಿಸಿದರು. ಅಂದು ಆ ಶಾಲೆಗೆ, ಮುಖ್ಯೋಪಧ್ಯಾಯರು ಹಾಗೂ ಶಿಕ್ಷಣ ಅಧಿಕಾರಿಗಳು ಬಂದು ವೀಕ್ಷಿಸಿ, ಚಿತ್ರಕಲಾ ಪಾಠ ಮಾಡುವ ಇವರ ವಿಧಾನ ನೋಡಿ, ಮೆಚ್ಚುಗೆ ನೀಡಿ ಇವರಿಗೆ ಬಹುಮಾನ ನೀಡಿದರು ಎಂಬ ಸಂಗತಿಯನ್ನು ಸೋಮಶೆಟ್ಟಿಯವರು ಖುಷಿಯಿಂದ ಹಂಚಿಕೊಳ್ಳುತ್ತಾರೆ.

ಮುಂದೆ ೮ನೇ ತರಗತಿಯ ವ್ಯಾಸಾಂಗವನ್ನು ಕಲಬುರಗಿಯ ಶರಣ ಬಸವೇಶ್ವರ ಮಲ್ಟಿ ಪರ್ಪಸ್ ಹೈಸ್ಕೂಲಿನಲ್ಲಿ ಅಭ್ಯಾಸ ಮಾಡತೊಡಗಿದರು. ಓದಿನೊಂದಿಗೆ ಚಿತ್ರ ಕಲೆಯನ್ನು ಬೆಳೆಸಿಕೊಳ್ಳುತ್ತ ಬಂದ ಇವರು ೮ನೇ ತರಗತಿ ಓದುತ್ತಿದ್ದಾಗ ಚಿತ್ರ ಕಲೆಯ ಹೈಯರ್ ಗ್ರೇಡ್ ಪರೀಕ್ಷೆ ಬರೆದು ತೇರ್ಗಡೆ ಹೊಂದಿದರು. ತದನಂತರ ೯ನೇ ತರಗತಿಯ ಅಭ್ಯಾಸ ಬೀದರಿನ ಸರಕಾರಿ ಮಲ್ಟಿ ಪರ್ಪಸ್ ಹೈಸ್ಕೂಲಿನಲ್ಲಿ ಮುಂದುವರೆಸಿದರು. ಆ ದಿನಗಳಲ್ಲಿ ಅವರ ತಂದೆಯವರು ಜಹಿರಾಬಾದದಿಂದ ಬೀದರಕ್ಕೆ ಬಂದು ರಂಗರೇಜ ಗಲ್ಲಿಯಲ್ಲಿಯ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ಎಸ್.ಎಸ್. ಮುದ್ದಾರವರ ಅಡತಿ ಅಂಗಡಿಯಲ್ಲಿ ಗುಮಾಸ್ತರಾಗಿ ಕೆಲಸ ನಿರ್ವಹಿಸುತ್ತಿದ್ದರು. ಅವರ ಸಂಬಳ ಅತೀ ಕಡಿಮೆಯಾಗಿತ್ತು. ಆ ಮೊತ್ತವು ಅವರ ದೊಡ್ಡ ಕುಟುಂಬ ನಿರ್ವಹಣೆಗೆ ಸಾಲದಾಗಿತ್ತು. ಇದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಚಂದ್ರಶೇಖರ, ತಂದೆಯವರಿಗೆ ಹೆಚ್ಚು ಭಾರ ಆಗದಿರಲೆಂದು, ಸಾಯಿನ್‌ಬೋರ್ಡಗಳನ್ನು ಬರೆಯಲು ಪ್ರಾರಂಭಿಸಿದರು. ಅಲ್ಲದೇ ಚುನಾವಣೆಗಳು ಬಂದಾಗ ಹಳ್ಳಿಗಳಿಗೆ ಹೋಗಿ ಪಕ್ಷ ಮತ್ತು ಅಭ್ಯರ್ಥಿಗಳ ಹೆಸರು ಗೋಡೆಗಳ ಮೇಲೆ ಸುಣ್ಣ – ಬಣ್ಣ ದಿಂದ ಬರೆಯುವ ಕಾರ್ಯ ಮಾಡುತ್ತಿದ್ದರು. ಜೊತೆಗೆ ಅಂಗಡಿಗಳ ಬ್ಯಾನರ್ ಬರೆಯುವ ಕೆಲಸ ಮಾಡುತ್ತ ತುಸು ಆದಾಯ ಪಡೆಯಲಾರಂಭಿಸಿದರು. ಹೀಗೆ ಬಾಲ್ಯದಲ್ಲಿ ಕಷ್ಟದ ದಿನ ಕಳೆದಿರುವ ಕಲಾವಿದರು ಕಲೆಯ ಆಸಕ್ತಿಯನ್ನು ಕುಂದಿಸಿಕೊಳ್ಳಲಿಲ್ಲ. ಅಭ್ಯಾಸ ಮುಂದುವರೆಸುತ್ತಾ ೧೯೬೯ನೇ ಇಸವಿಯಲ್ಲಿ ೧೦ನೇ ತರಗತಿ ತೇರ್ಗಡೆಯಾದರು.

ಸೋಮಶೆಟ್ಟಿಯವರು ಹತ್ತನೇ ತರಗತಿ ಉತ್ತೀರ್ಣರಾದ ಬಳಿಕ ಚಿತ್ರಕಲೆಯಲ್ಲಿ ಶಿಕ್ಷಣ ಪಡೆಯಲು ಇಚ್ಛಿಸಿದರು. ಇವರ ಇಚ್ಛೆ ಅನುಸಾರ ಇವರ ತಂದೆಯವರು ಚಿತ್ರಕಲೆಯ ಅಭ್ಯಾಸಕ್ಕೆ ಒಪ್ಪಿಗೆ ನೀಡಿದರು. ಕಲೆ ಕಲಿಕೆಗೆ ಹೊಸ ದಿಸೆ ಹುಡುಕುತ್ತ ಅವರಿವರೊಂದಿಗೆ ಸಮಾಲೋಚಿಸತೊಡಗಿದರು. ಆ ಸಂದರ್ಭದಲ್ಲಿ ಇವರಿಗೆ ದಿಕ್ಸೂಚಿಯಾದವರು ಶ್ರೀ ಚಂದ್ರಶೇಖರ ಚಕ್ಕಿಯವರು. ಶ್ರೀಯುತ ಚಕ್ಕಿಯವರು ಹವ್ಯಾಸಿ ಚಿತ್ರಕಲಾವಿದರಾಗಿದ್ದರು ಮತ್ತು ಬೀದರಿನ ಬಿ.ವ್ಹಿ. ಭೂಮರೆಡ್ಡಿ ಕಾಲೇಜಿನಲ್ಲಿ ಗುಮಾಸ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಸೋಮಶೆಟ್ಟಿಯವರ ಹಿರಿಯ ಸಹೋದರ ಶ್ರೀ ಸಿದ್ರಾಮಪ್ಪಾರವರೂ ಕೂಡಾ ಭೂಮರೆಡ್ಡಿ ಕಾಲೇಜಿನಲ್ಲಿ ಗುಮಾಸ್ತರಾಗಿ ಸೇವೆ ಸಲ್ಲಿಸುತ್ತಿದ್ದರಿಂದ ಚಕ್ಕಿಯವರ ಪರಿಚಯ ಸೋಮಶೆಟ್ಟಿಯವರಿಗಾಯಿತು. ಚಕ್ಕಿಯವರು ಸೋಮಶೆಟ್ಟಿಯವರನ್ನು ಕಲಬುರ್ಗಿಯ ಐಡಿಯಲ್ ಫೈನ್ ಆರ್ಟ ಮಹಾವಿದ್ಯಾಲಯದಲ್ಲಿ ಚಿತ್ರಕಲೆ ಡಿಪ್ಲೋಮಾ ಕೋರ್ಸಗೆ ಪ್ರವೇಶ ಪಡೆಯುವಂತೆ ಸಲಹೆ ನೀಡಿದರು. ಸೋಮಶೆಟ್ಟಿಯವರಿಗೆ ಸ್ವತಃ ಚಕ್ಕಿಯವರೆ ಕಲಬುರ್ಗಿಗೆ ಕರೆದುಕೊಂಡು ಹೋಗಿ ಅಲ್ಲಿ ಡಿಪ್ಲೋಮಾ ಪ್ರಥಮ ವರ್ಷದಲ್ಲಿ ಪ್ರವೇಶ ದಾಖಲಿಸಿ, ಅಲ್ಲಿಯ ಖ್ಯಾತ ಚಿತ್ರ ಕಲಾಕಾರರಾಗಿದ್ದ ಶ್ರಿ.ಜೆ.ಎಸ್. ಖಂಡೆರಾವ ಅವರಿಗೆ ಭೇಟಿ ಮಾಡಿಸಿ ಅವರ ಮಾರ್ಗದರ್ಶನ ಪಡೆಯಲು ನೆರವಾದರೆಂದು ದಿವಂಗತ ಶ್ರೀ ಚಂದ್ರಶೇಖರ ಚಕ್ಕಿಯವರನ್ನು ಸ್ಮರಿಸಿಕೋಳ್ಳುತ್ತಾರೆ ಶ್ರೀಯುತರು. ಚಿತ್ರಕಲೆ ಅಭ್ಯಾಸದ ಜೊತೆಗೆ ಹೈದರಬಾದನಲ್ಲಿ ಫೋಟೊಗ್ರಾಫಿ ತರಬೇತಿ ಕೂಡಾ ಪಡೆದಿರುತ್ತಾರೆ. ಆದರೆ ಇವರಿಗಿದ್ದ ಚಿತ್ರಕಲೆಯಲ್ಲಿಯ ಅಪಾರ ಆಸಕ್ತಿ ಕಾರಣವಾಗಿ ಫೋಟೊಗ್ರಾಫಿಗೆ ಹೆಚ್ಚು ಗಮನ ಕೊಡಲು ಬಿಡಲಿಲ್ಲ.

ಡಿಪ್ಲೋಮಾ ಅಂತಿಮ ಪರೀಕ್ಷಾ ಕೇಂದ್ರ ವಿದ್ಯಾಕಾಶಿಯಾದ ಧಾರವಾಡದಲ್ಲಿ ಇದ್ದುದರಿಂದ ಅವರು ಪರಿಕ್ಷೆಯ ಒಂದು ತಿಂಗಳ ಮೊದಲೇ ಧಾರವಾಡಕ್ಕೆ ತೆರಳಿದರು. ಅಲ್ಲಿ ಪೂಜ್ಯ ದಂಡಾವತಿ ಮಠ

ಅವರ ಬಳಿ ಉಳಿದುಕೊಂಡರು. ಅಲ್ಲಿ ಚಿತ್ರಕಲಾಭ್ಯಾಸ ಮಾಡಿದರು. ದಂಡಾವತಿ ಮಠ ಅವರ ಚಿತ್ರಶೈಲಿ ಶ್ರೀಯುತರಿಗೆ ಚಿತ್ರಕಲೆಯ ಸೂಕ್ಷ್ಮ ತಾಂತ್ರಿಕತೆಗಳನ್ನು ವಿಸ್ತಾರವಾಗಿ ಬೋಧನೆ ಮಾಡಿದರಂತೆ. ಇವರಲ್ಲಿಯ ಕಲಾಕ್ಷಮತೆ ಕಂಡು ಪ್ರಶಂಶಿಸಿ, "ಕಲೆಯೊಳಗೆ ನಿನ್ ಭವಿಷ್ಯ ಐತಿ, ನೀ ಹಿಂಗಾ ಕಲೆ ಮುಂದುವರಿಸು" ಎಂದು ಸಲಹೆ ನೀಡಿದರಂತೆ. ಧಾರವಾಡದಲ್ಲಿರುವಾಗ ಶ್ರೀ ಕುಲಕರ್ಣಿ ಮತ್ತು ಇತರರೊಂದಿಗೆ ಸ್ನೇಹ ಬೆಳೆಯಿತು. ಅವರೊಂದಿಗೆ ಕಲೆಯ ತಾಂತ್ರಿಕತೆಗಳ ಕುರಿತು ಚರ್ಚೆ ಮಾಡುತ್ತಿದ್ದರು. ಅವರ ಡಿಪ್ಲೋಮಾ ಪರೀಕ್ಷೆ ಕೊನೆಯ ದಿನ, ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಬೀದರನ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಕರ್ನಾಟಕ ಹೈಸ್ಕೂಲ್ ಚಿತ್ರಕಲಾ ಶಿಕ್ಷಕ ಹುದ್ದೆಗೆ ನೇಮಕಾತಿ ಅಧಿಸೂಚನೆ ಪ್ರಕಟಗೊಂಡ ಮಾಹಿತಿಯನ್ನು ಅವರ ಮಿತ್ರ ನೀಡಿದರಂತೆ. ಪರೀಕ್ಷೆಯ ನಂತರ ಬೇಗನೆ ಬೀದರಕ್ಕೆ ಹಿಂದುರುಗಿ, ಸಂಸ್ಥೆಗೆ ತೆರಳಿ ಸಂದರ್ಶನ ನೀಡಿಬಂದರು. ಬರೆದ ಪರೀಕ್ಷೆಯ ಫಲಿತಾಂಶದ ನಿರೀಕ್ಷೆಯಲ್ಲಿದ್ದ ಇವರಿಗೆ ರಾಜ್ಯಮಟ್ಟದಲ್ಲಿ ೨ನೇ ರ್‍ಯಾಂಕ್ ಸ್ಥಾನ ದೊರಕಿತು. ತರುವಾಯ ಅವರಿಗೆ ಚಿತ್ರಕಲೆ ಶಿಕ್ಷಕರೆಂದು ನೇಮಕಾತಿ ಆದೇಶವೂ ಬಂತು. ಇದು ಅವರಲ್ಲಿಯ ಪ್ರತಿಭೆಗೆ ಸಿಕ್ಕ ಗೌರವವಾಗಿದೆ. ಅವಕಾಶಗಳು ಪ್ರತಿಭೆಯನ್ನು ಹುಡುಕಿಕೊಂಡು ಬರುತ್ತವೆ ಎಂಬುದಕ್ಕೆ ಈ ಸಂಗತಿಯು ನಿದರ್ಶನವಾಗಿದೆ.

ಕುಟುಂಬ :

ಶ್ರೀಯುತರ **ಕೌಟುಂಬಿಕ ಜೀವನ** ಆದರ್ಶಪ್ರಾಯವಾಗಿದೆ. ಸೋಮಶೆಟ್ಟಿಯವರು ವೈವಾಹಿಕ ಜೀವನಕ್ಕೆ ಪಾದಾರ್ಪಣೆ ಮಾಡಿದ್ದು ೧೯೭೧ನೇ ಜೂನ್ ಏಳನೆ ತಾರೀಕಿನಂದು. ಇವರ ಕಲಾ ಬದುಕಿನ ಪ್ರಯಾಣಕ್ಕೆ ಸಂಗಾತಿಯಾದವರು, ನೆರೆಯ ತೆಲಂಗಾಣಾ ರಾಜ್ಯದ ರಂಗಾರೆಡ್ಡಿ ಜಿಲ್ಲೆಯ ತಾಂಡೂರಿನ ಶ್ರೀಮತಿ ಶಂಕರಮ್ಮ ಮತ್ತು ಶ್ರೀ ವೀರಪ್ಪ ಪೋಲಾರವರ ಸುಪುತ್ರಿ ಚಂದ್ರಕಲಾರವರು. ಇವರ ಆದರ್ಶ

ದಾಂಪತ್ಯ ಜೀವನದಲ್ಲಿ ಮೂಡಿ ಬಂದ ಮೊದಲ ಸಂತಾನ ಮಗಳು ಸುಮಂಗಲಾ ನಂತರದಲ್ಲಿ ಈರ್ವರು ಗಂಡು ಮಕ್ಕಳಾದ ರೇವಣಕುಮಾರ ಮತ್ತು ಬಸವಕುಮಾರ. ಸರಳ ಜೀವನ ಮತ್ತು ಕಲಾ ಸೇವೆ ನಡೆಸುತ್ತಲೇ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿರುತ್ತಾರೆ. ಮಗಳು ಬಿ.ಎಸ್ಸಿ.ಬಿ.ಎಡ್ ಪದವಿಧರೆ, ಇವರ ವಿವಾಹವು ಬೀದರ ತಾಲ್ಲೂಕಿನ ಸಿರ್ಸಿ ಗ್ರಾಮದ ಶ್ರೀ ಬಸವರಾಜ ವೈಜಿನಾಥ ಪಾಟೀಲ ಅವರೊಂದಿಗೆ ೦೯.೦೫.೨೦೦೧ ರಲ್ಲಿ ನೆರವೇರಿತು. ಇವರ ಅಳಿಯ ಬಹುರಾಷ್ಟ್ರೀಯ ಕಂಪನಿಯಲ್ಲಿ ಇಂಜಿನಿಯರ್‌ರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಈಗ ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾರೆ. ಇವರಿಗೆ ಕು॥ ಗೌರಿ ಮತ್ತು ಕು॥ ಸಾಂಚಿ ಎಂಬ ಎರಡು ಮುದ್ದು ಹೆಣ್ಣು ಮಕ್ಕಳಿದ್ದಾರೆ. ಇನ್ನು ಮಗ ಶ್ರೀ ರೇವಣಕುಮಾರ ತಮ್ಮ ಬಿ.ಎಸ್ಸಿ. ಪದವಿ ಮತ್ತು ಕಂಪ್ಯೂಟರ್‌ನಲ್ಲಿ ಸ್ನಾತ್ತಕೋತ್ತರ ಡಿಪ್ಲೋಮಾ ಶಿಕ್ಷಣ ಪಡೆದಿದಾರೆ. ಬೆಂಗಳೂರಿನಲ್ಲಿ ಕೆಲ ದಿನ ನೌಕರಿ ಮಾಡಿದರು. ನಂತರ ತಂದೆ ತಾಯಿಗಳ ಬಳಿ ಇರಬೇಕೆಂದು ಬೀದರಕ್ಕೆ ಹಿಂದಿರುಗಿ, ಈಗ ಸ್ವಂತ ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರ ಶ್ರೀಮತಿ ಮಹಾನಂದರವರು ತೆಲಂಗಾಣ ರಾಜ್ಯದ ಮೆದಕ್ ಜಿಲ್ಲೆಯ ನಾರಾಯಣಖೇಡ್ ತಾಲ್ಲೂಕಿನ ಏಸಗಿ ಗ್ರಾಮದವರು ಇವರಿಗೆ ವಿಭೂ ಎಂಬ ಮಗ ಮತ್ತು ದೀಕ್ಷಾ ಎಂಬ ಮುದ್ದಾದ ಮಗಳಿದ್ದಾಳೆ. ಇವರ ಎರಡನೇ ಸುಪುತ್ರ ಶ್ರೀ ಬಸವಕುಮಾರ ಬಿ.ಎಸ್ಸಿ.ಅರಣ್ಯಶಾಸ್ತ್ರದ ಪದವೀಧರರು. ಇವರು ಖಾಸಗಿ ವಲಯದ ಉದ್ಯೋಗಸ್ತರು. ಇವರ ಪತ್ನಿ ಶ್ರೀಮತಿ ವೀಣಾ ಇವರದು ಬೀದರ ತಾಲೂಕಿನ ಸಿರ್ಸಿ (ಔರಾದ) ಇವರಿಗೆ ಸದ್ಯ ಸಿಂಧು ಎಂಬೊಬ್ಬ ಮಗಳಿದ್ದಾಳೆ. ಹೀಗೆ ಕಲಾವಿದ ಸೋಮಶೆಟ್ಟಿಯವರು ತಮ್ಮ ಇಳಿವಯಸ್ಸಿನಲ್ಲಿ ತುಂಬಿದ ಕುಟುಂಬದೊಂದಿಗೆ ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ.

ಜೀವನ ಸಾಧನೆ :

Every Artist dips his brush in his own soul and paints his ownnature into his picture ಎಂಬ ನುಡಿಗಳಂತೆ ನಿಜವಾದ ಕಲಾವಿದನು ತನ್ನ ಕುಂಚವನ್ನು ತನ್ನಾತ್ಮದಲ್ಲಿ ಅದ್ದಿ ತನ್ನ ಸ್ವಭಾವವನ್ನು ತಾನು ಬಿಡಿಸುವ ಕಲಾಕೃತಿಗಳಲ್ಲಿ ಮೂಡಿಸುತ್ತಾನೆ. ಎಂಬ ಮಾತು ಸೋಮಶೆಟ್ಟಿಯವರ ಬದುಕು ಮತ್ತು ಅವರ ಕಲಾಕೃತಿ ನೋಡಿದಾಗ ಸತ್ಯವೆನಿಸುತ್ತದೆ. ಇವರು ರೂಪಿಸಿಕೊಂಡ ವೈವಿಧ್ಯಮಯ ಕಲಾಕೃತಿಗಳು ಇವರ ಪ್ರತಿಭೆಗೆ ಹಿಡಿದ ಕನ್ನಡಿಯಾಗಿದೆ.

ಇವರ ತಂದೆಯವರು ಅಪ್ಪಟ ಬಸವ ಮಾರ್ಗಿಗಳಾಗಿದ್ದರು. ಆದ್ದರಿಂದ ಶರಣರ ವಿಚಾರ ಇವರಿಗೆ ಎರಕವಾಗಿ ಬಂದಿದೆ, ಅವರ ತಂದೆಯವರಂತೆ, ಸೋಮಶೆಟ್ಟಿಯವರು ತಮ್ಮ ಬದುಕನ್ನು ಶರಣ ತತ್ವ ದಾರಿಯಲ್ಲಿ ಸವೆಸುತ್ತಾ ಬಂದಿದ್ದಾರೆ. ಶರಣ ತತ್ವ ಮೌಲ್ಯಗಳು ಇವರ ಮೇಲೆ ಹೆಚ್ಚು ಪ್ರಭಾವ ಬೀರಿದಂತಿವೆ. ಇವರ ಬದುಕಿನ ದುಮ್ಮಾನಗಳಲ್ಲಿಯೂ ಸ್ಥೈರಣೆಯಿಂದ ಮುನ್ನಡೆಯಲು ಪ್ರೇರಣೆ ನೀಡಿದಂತಿವೆ. ಅಂತೆಯೇ ಅವರ ಕಲಾಕೃತಿಗಳಲ್ಲಿ ಬಸವಣ್ಣನವರ ಮತ್ತು ಶರಣರ ಭಾವಚಿತ್ರಗಳೆ ಬಹುತೇಕವಾಗಿ ಅಭಿವ್ಯಕ್ತವಾಗಿದೆ.

ಆಧ್ಯಾತ್ಮವು ಆತ್ಮ ಸಾಕ್ಷಾತ್ಕಾರದ ಜ್ಞಾನ, ಸಾಮಾಜಿಕ ಜೀವನದ ನಡೆ ನುಡಿ ಮತ್ತು ಸಾರ್ಥಕ ಬದುಕಿಗೆ ಬಸವಾದಿ ಶರಣರ ವಿಚಾರಧಾರೆಗಳು ಅವರ ವಚನಗಳ ರೂಪದಲ್ಲಿ ವ್ಯಕ್ತವಾಗಿದೆ. ವಚನಗಳು ಜನ ಸಾಮಾನ್ಯರ ಸರಳ ಹಾಗು ಆಡು ಭಾಷೆಯಲ್ಲಿದುರಿಂದ ಸಮಾಜದ ಎಲ್ಲ ವರ್ಗದವರಿಗೂ ತಲುಪುವಂತಹವು. ವಚನಗಳ ಅಧ್ಯಯನದಿಂದ ಬಸವಾದಿ ಶರಣರ ಬದುಕು ತತ್ವಭೋದೆ ಅರ್ಥಮಾಡಿಕೊಳ್ಳಬಹುದು. ಆದರೆ ಓದು ಅರಿಯದ ಅನಕ್ಷರಸ್ತರಿಗೆ ಇದು ತುಸು ಕಷ್ಟ. ಅನಕ್ಷರಸ್ತರಿಗೂ ತತ್ವ ಭೋದೆ ಮನಮುಟ್ಟುವಂತೆ ವಿವರಿಸಲು ದೃಶ್ಯ ಮಾಧ್ಯಮ ಬಲು ಸೂಕ್ತ ಏಕೆಂದರೆ A picture can speak thousand words ಎಂಬುದು

ಗಮನಾರ್ಹ ಸಂಗತಿ. ಈ ನಿಟ್ಟಿನಲ್ಲಿ ಬಸವ ಧರ್ಮ ಪ್ರಸಾರಕ್ಕೆ ಪೂರಕವಾಗುವಂತೆ ಶರಣರ ಮತ್ತು ಅವರ ಕಾಯಕ ತಿಳಿಸಿಕೊಡುವ ಭಾವಚಿತ್ರ ಹಾಗೂ ಅವರ ಬದುಕಿನ ಪ್ರಮುಖ ಘಟ್ಟಗಳನ್ನು ತಿಳಿಸುವ ಸಂಗತಿಗಳನ್ನು ಅರ್ಥಮಾಡಿಕೊಂಡು, ಸನ್ನಿವೇಷಗಳನ್ನು ಕಲ್ಪಿಸಿಕೊಂಡು ರೇಖಾ ಚಿತ್ರದಲ್ಲಿ ವ್ಯಕ್ತಪಡಿಸಿ ಕೆಲವಕ್ಕೆ ಬಹುವರ್ಣ ತುಂಬಿದ್ದಾರೆ. ಅವು ದರ್ಶಕರ ಕಣ್ಮನ ತುಂಬುತ್ತವೆ. ಈ ನಿಟ್ಟಿನಲ್ಲಿ ಇವರ ನಿಸ್ವಾರ್ಥ ಸೇವೆ ಮೌನವಾಗಿಯೇ ನಡೆಯುತ್ತಿದೆ.

ಬಸವ ಧರ್ಮಕ್ಕಾಗಿ ಇವರ ಸೇವೆ ಎಲೆಮರೆಯ ಕಾಯಿಯಂತೆ, ವೃತ್ತಿ ಜೀವನದಲ್ಲಿ ನಿತ್ಯ ಶಿಕ್ಷಕ ಕಾಯಕದೊಂದಿಗೆ ಉಳಿದ ಸಮಯದಲ್ಲಿ ಕಲಾಕೃತಿ ರಚಿಸಿ ಸಮಾಜಕ್ಕೆ ಅರ್ಪಿಸಿರುತ್ತಾರೆ. ಇವರ ೩೨ ವರ್ಷಗಳ ವೃತ್ತಿ ಜೀವನದ ಒಟ್ಟು ದುಡಿಮೆಯ ಬಹುತೇಕ ಆದಾಯ ಕಲೆಯ ಬೆಳವಣಿಗೆಗೆ ಬಳಸಿರುತ್ತಾರೆ. ಅಷ್ಟೇ ಅಲ್ಲ "ಕಲೆಯೇ ಜೀವನದ ಸಾಕ್ಷತ್ಕಾರ"ಎಂದು ನಂಬಿ, "ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದ ಕ್ರಿಯೇಯ ಮಾಡೆನು, ನಿಮ್ಮ ಸೊಮ್ಮಿಂಗೆ ಸಲಿಸುವೆ ನಿಮ್ಮಾಣೆ" ಎಂಬ ಬಸವಣ್ಣನವರ ನುಡಿಗಳಂತೆ, ಇವರ ನಿವೃತ್ತ ಸಮಯದ ಒಟ್ಟು ಹಣ ಇವರ ಜೀವಮಾನದ ಕಲಾ ಸಾಧನೆಯ ಯೋಜನೆಗೆ ಮುಡುಪಾಗಿಟ್ಟಿರುತ್ತಾರೆ. ಇವರ ನಿವೃತ್ತಿ ನಂತರದ ಸಂಪೂರ್ಣ ಶ್ರಮ ಮತ್ತು ಸಮಯ ಬಸವಣ್ಣನವರ ಜೀವನದ ಚರಿತ್ರೆ ಹೇಳುವ ಪ್ರಮುಖ ಘಟನಾವಳಿಗಳ ೧೦೮ಕ್ಕೂ ಹೆಚ್ಚು ಭಾವಚಿತ್ರಗಳು ರಚಿಸುವಲ್ಲಿ ಸವೆಸುತ್ತಿದ್ದಾರೆ. ಇವು ಜಲವರ್ಣದಲ್ಲಿರುವುದು ಅತೀ ವಿಶೇಷ ೩x೨ ಅಡಿ ಅಳತೆಯ ಪ್ರತಿ ಭಾವಚಿತ್ರಗಳು ಅತಿ ಆಕರ್ಷಕ ಮನಮೋಹಕ ಅಲ್ಲದೇ ಬಸವಣ್ಣನವರ ಜೀವನದ ಸಂದೇಶ ಮತ್ತು ಚರಿತ್ರೆ ಸಾರುವ ಸಾಧನಗಳಾಗಿವೆ. ಕಲಾವಿದನ ಭಕ್ತಿ ಭಾವದ ಕಲ್ಪನೆಗಳು ಚಿತ್ರರೂಪ ಪಡೆದು ವರ್ಣಜೀವ ತುಂಬಿಸಿಕೊಂಡು ಸಿದ್ಧರೂಪ ಪಡೆಯಲು ತಗಲಿರುವ ಸಮಯ ೧೨ ವರ್ಷಗಳು. ಇದು ಹನ್ನೆರಡು ವರ್ಷಗಳ ಕಾಲ ಮಾಡಿರುವ

ತಪಸ್ಸೆಂದೆ ಹೇಳಬಹುದು. ಇವರ ಈ ಜೀವಮಾನದ ಯೋಜನೆ ಅನೇಕ ಮಠಾಧೀಶರು, ಧಾರ್ಮಿಕ ಮುಖಂಡರು ಮತ್ತು ಕಲಾಭಿಮಾನಿಗಳು ಮುಕ್ತ ಕಂಠದಿಂದ, ಭಕ್ತಿ ಭಾವದಿಂದ, ಧನ್ಯತಾ ಭಾವದಿಂದ ಗೌರವಿಸಿದ್ದಾರೆ, ಶ್ಲಾಘನೆ ವ್ಯಕ್ತಪಡಿಸಿ ಶುಭ ಹಾರೈಸಿದ್ದಾರೆ.

ಮಾಸದ ನೆನಪುಗಳು :

೧. ಒಮ್ಮೆ ಬೀದರನ ಬಿ.ವ್ಹಿ.ಬಿ. ಕಾಲೇಜಿನ ಪ್ರಾಂಶುಪಾಲರಾಗಿದ್ದ **ಶ್ರೀ ಬಿ.ಟಿ. ಸಾಸನೂರ** ರವರು ಬೆಳಗಿನ ಜಾವ ಸರಿಸುಮಾರು ೭.೦೦ ಗಂಟೆಗೆ ಇವರ ಮನೆಗೆ ಬಂದುರು. ಏಕಾಏಕಿ ಪ್ರಾಂಶುಪಾಲರು ಇವರ ಮನೆಗೆ ಬಂದುದ ಕಂಡು ಆಶ್ಚರ್ಯರಾದರು. ಸಾಸನುರರವರು ಶ್ರೀ ಮಹಾದೇವಪ್ಪಾ ರಾಂಪೂರೆಯವರು ನಿಧನರಾದ ಸುದ್ದಿ ತಿಳಿಸಿದರು, ಅಂದು ಅವರ ಶೃದ್ಧಾಂಜಲಿ ಕಾರ್ಯಕ್ರಮ ಮಾಡಲು ಅವರ ಭಾವಚಿತ್ರ ಬೇಕಾಗಿದೆ ಎಂದು ಹೆಳಿ, ಮಹಾದೇವಪ್ಪಾ ರಾಂಪೂರೆಯವರ ಒಂದು ಚಿಕ್ಕ ಫೋಟೋ ಕೈಗಿಟ್ಟು ಬೆಳಗಿನ ೧೦ ಗಂಟೆಯ ಸುಮಾರಿಗೆ ಒಂದು ಭಾವಚಿತ್ರ ಬಿಡಿಸಿಕೊಡಲು ಹೇಳಿದರು. ಆಗ ಅವರಿಗಿರುವ ಸಮಯ ಕೇವಲ ೩ ಗಂಟೆಗಳ ಅವಧಿ. ಆದರೂ ಒಪ್ಪಿಕೊಂಡ ಆ ಕೆಲಸ ನೀಡಿರುವ ಅವಧಿಯಲ್ಲಿಯೇ ಪೂರ್ಣಗಳಿಸಿದರು. ಅವಸರದಲ್ಲಿ ಆದರೂ ಕಲಾಕೃತಿಯ ಗುಣಮಟ್ಟದಲ್ಲಿ ಯಾವುದೇ ರಾಜಿ ಆಗಿರಲಿಲ್ಲ. ರಾಂಪೂರೆಯವರ ಭಾವಚಿತ್ರ ಬಿ.ಟಿ. ಸಾಸನೂರು ಅವರ ಮನ ಮೆಚ್ಚಿಸಿತು. ಇತರೆ ಅನೇಕರು ಮೆಚ್ಚುಗೆ ವ್ಯಕ್ತಪಡಿಸಿದರು. ಈಗಲೂ ಆ ಭಾವಚಿತ್ರ ಬಿ.ವ್ಹಿ. ಭೂಮರೆಡ್ಡಿ ಕಾಲೇಜಿನಲ್ಲಿಯ ಒಳ ಪ್ರವೇಶದ್ವಾರದಲ್ಲಿರುವುದು ಕಾಣಬಹುದಾಗಿದೆ.

೨. ಬೀದರನ ಜಿಲ್ಲಾಡಳಿತ ವತಿಯಿಂದ ಆಚರಿಸಲಾಗುತ್ತಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಮೆರವಣಿಗೆಗಾಗಿ ಕನ್ನಡಾಂಬೆ ಬಾವ ಚಿತ್ರ ಅವಶ್ಯಕವಿತ್ತು. ಆಗ ಭಾವ ಚಿತ್ರ ಬಿಡಿಸುವ ಜವಾಬ್ದಾರಿ ಇವರಿಗೆ ನೀಡಲಾಯಿತು. ಭಾವ ಚಿತ್ರವನ್ನು ಬಣ್ಣದ ರಂಗೋಲಿ ಬಳಸಿ ಬಟ್ಟೆಯ ಮೇಲೆ ತಾಯಿ ಭುವನೇಶ್ವರಿಯ ಚಿತ್ರ ಬರೆದು ಕೊಟ್ಟರು. ಅವರ ಈ ಸೃಜನಶೀಲ ಕಲಾಕೃತಿ ಎಲ್ಲರ ಮೆಚ್ಚುಗೆ ಪಡೆಯಿತು. ಜನರ ಮೆಚ್ಚುಗೆಯಿಂದ ಇವರಿಗೆ ಅತೀವ ಆನಂದವಾಯಿತು. ಅಲ್ಲಿ ಬಳಕೆಯಾದ ಪರಿಕರಗಳು ಅಲ್ಪ ಬೆಲೆಯದಾದರೂ ಅರಳಿದ ಕಲೆಗೆ ಸಂದ ಗೌರವ ಅತಿಯಾದದ್ದು. ಅದೇ ರೀತಿ ಕಲಾವಿದರ ಜೀವನ ಬಡತನದಿಂದಿದ್ದರು ಅವರಿಂದ ರೂಪಗೊಂಡ ಕಲೆ ವೈಭವಪೂರ್ಣವಾಗಿರಬೆಕೆಂಬ ವಿಚಾರ ಸಾಕ್ಷಾತ್ಕಾರವಾಗುತ್ತದೆ. ಇದು ಅವರ ಸಾತ್ವಿಕ ಬದುಕಿಗೆ ಇಂಬು ನೀಡಿರುವ ಸಂಗತಿ.

೩. ಬೀದರ ನಗರವು ಮಹಾರಾಷ್ಟ್ರ ಮತ್ತು ತೆಲಂಗಾಣ ನೆರೆ ಹೊಂದಿರುವುದರಿಂದ ಮತ್ತು ನಿಜಾಮನ ಆಳ್ವಿಕೆಯ ಪರಿಣಾಮ ಇಲ್ಲಿಯ ಆಡು ಭಾಷೆಗೆ ಉರ್ದು, ಮರಾಠಿ ಮತ್ತು ತೆಲುಗು ಮಿಶ್ರಣವಾಗಿ ಇಲ್ಲಿಯ ಕನ್ನಡ ಬೆರಕೆಯಾಗಿದೆ. ಹಾಗಾಗಿ ಇಲ್ಲಿ ಕನ್ನಡ ದಿನ ಪತ್ರಿಕೆ ನಡೆಸುವುದು ಕಷ್ಟಕರವಾಗಿತ್ತು. ಅಂತಹ ಸ್ಥಿತಿಯಲ್ಲಿ ಅವರ ಮಿತ್ರರಾದ, ಸಾಹಿತಿ **ಎಂ.ಜಿ. ದೇಶಪಾಂಡೆ** ಅವರು ಕನ್ನಡ ದಿನ ಪತ್ರಿಕೆ ಆರಂಭಿಸುವ ಚಿಂತನೆ ನಡೆಸಿದ್ದರಂತೆ. ಆ ದಿನಗಳಲ್ಲಿ ಮುದ್ರಣ ಕೆಲಸ ಸರಳವಾಗಿರಲಿಲ್ಲ. ಆದರೂ ದೇಶಪಾಂಡೆಯವರ ಇಚ್ಛೆ ಮತ್ತು ಪ್ರಯತ್ನಕ್ಕೆ ಬೆಂಬಲಿಸಿ, ದೇಶಪಾಂಡೆಯವರು ಬರೆದುಕೊಟ್ಟ ಲೇಖನ ಮಮತಾಜ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಕಲ್ಲಿನ ಮೇಲೆ ಬರೆದು ಕೊಡುತ್ತಿದ್ದರಂತೆ. ಈ ರೀತಿ ಬೀದರ್‌ನಲ್ಲಿ ಕನ್ನಡ ಪತ್ರಿಕೆ ಪ್ರಾರಂಭಗೊಂಡಿತು.

ಹೀಗೆ ಕನ್ನಡದ ಸೇವೆಯಲ್ಲಿ ಕಲಾವಿದರು ತೊಡಗಿಸಿಕೊಂಡ ವಿಷಯ ಸಾಹಿತಿ ದೇಶಪಾಂಡೆಯವರು ವಿವರಿಸುತ್ತಾರೆ.

೪. ಬೀದರನಲ್ಲಿ ಚಿತ್ರ ಕಲೆ ಇತ್ತಾದರೂ, ಚಿತ್ರ ಕಲಾವಿದರಾಗಲಿ ಅಥವಾ ಚಿತ್ರಕಲಾ ಶಿಕ್ಷಕರಾಗಲಿ ಸಂಘಟಿತರಾಗಿ ಸಾಮೂಹಿಕವಾಗಿ ಒಂದೆಡೆ ಸೇರಿ ಚಿಂತನೆ ನಡೆಸುವ ವೇದಿಕೆಯ ಕೊರತೆ ಇತ್ತು. ಕಾರಣ ಎಲ್ಲ ಚಿತ್ರಕಲಾ ಶಿಕ್ಷಕರು ಕೂಡಿ **"ಬೀದರ ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘ"** ಹುಟ್ಟು ಹಾಕಿದರು. ಸಭೆಯಲ್ಲಿ ಸಂಘದ ಸದಸ್ಯರೆಲ್ಲ ಸರ್ವಾನುಮತದಿಂದ ಶ್ರಿ ಸೋಮಶೆಟ್ಟಿಯವರನ್ನು ಅಧ್ಯಕ್ಷರನ್ನಾಗಿ ನೇಮಿಸಿದರು. ಖುಶಿಯಿಂದ ಆ ಜವಾಬ್ದಾರಿ ಒಪ್ಪಿಕೊಂಡು, ಆ ಸಂಘದ ಕಾರ್ಯಕಲಾಪ ಎಲ್ಲರೂ ಮೆಚ್ಚುವ ಹಾಗೆಯೇ ಎರಡು ವರ್ಷ ನಡೆಸಿಕೊಂಡು ಬಂದರು.

೫. ವಿಶ್ವದ ಪ್ರಾಚೀನ ಸುಪ್ರಸಿದ್ಧ ಕಲೆಗಳಲ್ಲಿ **ಬಿದರಿ ಕಲೆ**ಯೂ ಒಂದು. ಅವರ ಮಿತ್ರರಾದ ಶಿವರಾಜರವರು ಈ ಕಲೆ ಕರಗತ ಮಾಡಿಕೊಂಡ ಪ್ರಸಿದ್ಧ ಕಲಾವಿದರು. ಅವರೊಂದಿಗೆ ಸೋಮಶೆಟ್ಟಿಯವರು ಕಲೆಯಲ್ಲಿ ಸೃಜನಶೀಲತೆ ಕುರಿತು ಚರ್ಚಿಸುತ್ತಿದ್ದರು. ಒಂದು ದಿವಸ ದೇಹಲಿಯಿಂದ ಶಿವರಾಜರವರಿಗೆ ಒಂದು ಪತ್ರ ಬಂದಿತು. ಅದರಲ್ಲಿ ಅಂತರಾಷ್ಟ್ರೀಯ ಕಲಾ ಪ್ರದರ್ಶನದಲ್ಲಿ ಭಾಗಿಯಾಗುವಂತೆ ಅಹ್ವಾನವಿತ್ತು. ಸದರಿ ಪ್ರದರ್ಶನಕ್ಕೆ ವೀಶೇಷ ಕಲಾಕೃತಿ ನಿರ್ಮಿಸುಲು ಇಬ್ಬರು ಪರಸ್ಪರ ಚಿಂತಿಸಿದರು. ನಂತರ ಸೋಮಶೆಟ್ಟಿಯವರು ರೇಖಾ ಚಿತ್ರದಲ್ಲಿ ಒಂದು ಭಾರತದ ನಕಾಶೆ ಬಿಡಿಸಿ ಅದರಲ್ಲಿ ಪಾರ್ಲಿಮೆಂಟ್, ಮೇಲೆ ತ್ರಿವರ್ಣ ಧ್ವಜ ಮತ್ತು ಭಾರತ ದೇಶದ ಬುನಾದಿಯಾದ ಒಕ್ಕಲುತನ ಮತ್ತು ಕೈಗಾರಿಕೆ ಒಳಗೊಂಡ ಚಿತ್ರ ಮಾಡಿಕೊಟ್ಟರು. ಶಿವರಾಜರವರು ಆ ಚಿತ್ರದಲ್ಲಿದುದನ್ನು ಬಿದ್ರಿ

ವರ್ಕದಲ್ಲಿ ಬಿಸಿಲು- ನೆರಳು ಕಲಾಕೃತಿ ತತ್ವದ ಮೇಲೆ ಮೂಡಿಸಿ, ಸುಂದರ ಕಲಾಕೃತಿ ಸಿದ್ಧಗೊಳಿಸಿದರು. ಆ ಕಲಾಕೃತಿ ಪ್ರದರ್ಶನದಲ್ಲಿ ಪ್ರಥಮ ಬಹುಮಾನ ಗಿಟ್ಟಿಸಿತಂತೆ. ಆ ಬಹುಮಾನ ಪದಕವನ್ನು ರಾಷ್ಟ್ರಪತಿಯವರ ಹಸ್ತದಿಂದ ಸ್ವೀಕರಿಸಿದ ಶಿವರಾಜರವರು ಬೀದರಕ್ಕೆ ಹಿಂದಿರುಗಿದ ನಂತರ, ಮೊದಲು ಆ ಪದಕ ಸೋಮಶೆಟ್ಟಿಯವರ ಕೈಯಲ್ಲಿ ಕೊಟ್ಟು ಧನ್ಯವಾದ ಅರ್ಪಿಸಿ, ಸಂತೋಷ ಹಂಚಿಕೊಂಡರಂತೆ. ಆ ಸಂಗತಿ ಸ್ವತಃ ಸೋಮಶೆಟ್ಟಿಯರೇ ಬಹುಮಾನ ಪಡೆದಂತೆ ಸಂತೋಷವಾಯಿತೆಂದು ಹೆಮ್ಮೆಯಿಂದ ಈ ಸಂಗತಿ ನೆನಪಿಸಿಕೊಳ್ಳುತ್ತಾರೆ.

೭) ಸೋಮಶೆಟ್ಟಿಯವರು ಕಲೆಯ ಜೊತೆಗೆ ಸಾಹಿತ್ಯಾಸಕ್ತರು, ಸಾಹಿತಿಗಳ ಒಡನಾಟ ಬಯಸುವವರು. ಖ್ಯಾತ ಪ್ರಬಂದಕಾರರಾದ ಪ್ರೊ. ವೀರೇಂದ್ರ ಸಿಂಪಿಯವರ ತಂದೆ ಹಿರಿಯ ಸಾಹಿತಿಗಳಾಗಿದ್ದ ಸಿಂಪಿ ಲಿಂಗಣ್ಣನವರು ಬೀದರಕ್ಕೆ ಬಂದಾಗಲೆಲ್ಲ, ಅವರಿಂದ ಸೋಮಶೆಟ್ಟಿಯವರು ಸಾಹಿತ್ಯದ ಮಾಹಿತಿ ಪಡೆಯುತ್ತಿದ್ದರು. ಅಂಥ ಮೇಧಾವಿಗಳ ಒಡನಾಟದಿಂದ ಕಲಾ ಸಾದನೆಗೆ ಸಾತ್ವಿಕ ಸ್ಫೂರ್ತಿ ದೊರೆತಿರುವುದು ಸ್ಮರಿಸಿಕೊಳ್ಳುತ್ತಾರೆ. ಪಂಚಾಕ್ಷರಿ ಪುಣ್ಯಶೆಟ್ಟಿ ಅವರ ಜೊತೆ ಕೂಡಿಕೊಂಡು ಮೈಸೂರು, ಧಾರವಾಡದ ಕಡೆಗೆ ಪ್ರವಾಸಕ್ಕೆ ತೆರಳಿದಾಗ ಅಲ್ಲಿ ಪ್ರಸಿದ್ಧ ಸಾಹಿತಿಗಳನ್ನು ಭೇಟಿ ಮಾಡುತ್ತಿದ್ದರಂತೆ. ಅಂತಹ ಸಂಧರ್ಭಗಳಲ್ಲಿ ಹಿರಿಯ ಸಾಹಿತಿಗಳಾದ ತಿ.ತಾ. ಶರ್ಮಾ, ಅ.ನ.ಕೃ, ಬಿ.ಚಿ, ಹಾ.ಮಾ.ನಾಯಕ, ದ.ರಾ. ಬೇಂದ್ರೆ ಅಲ್ಲದೇ ಅನೇಕ ಹಿರಿಯ ಸಾಹಿತಿಗಳ ಜೊತೆಗೆ ಸೋಮಶೆಟ್ಟಿಯವರು ಕಲೆಯ ಬಗ್ಗೆ ಚರ್ಚೆ ಮಾಡುವ ಸಿಕ್ಕ ಅವಕಾಶಗಳನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

೮) ಅಂದಿನ ಘನತೆವೆತ್ತ ಉಪರಾಷ್ಟ್ರಪತಿಗಳಾದ ಕನ್ನಡಿಗ ಶ್ರೀ ಬಿ.ಡಿ. ಜತ್ತಿಯವರು ಬೀದರನ ಬಸವ ಮಂಟಪಕ್ಕೆ ಒಂದ್ದೊಮ್ಮೆ ಭೇಟಿ ನೀಡಿದ್ದರು. ಆ ಸಂಧರ್ಭದಲ್ಲಿ ಕಾರ್ಯಕ್ರಮಕ್ಕಾಗಿ ವಚನ ಪಿತಾಮಹ ಲಿಂಗೈಕ್ಯ ಫ.ಗು. ಹಳಕಟ್ಟಿಯವರ ಭಾವಚಿತ್ರ ಬೇಕಾಗಿತ್ತು. ಹಳಕಟ್ಟಿಯವರ ಬಾವಚಿತ್ರವನ್ನು ಸೋಮಶೆಟ್ಟಿಯವರು ತೈಲವರ್ಣದಲ್ಲಿ ಮೂಡಿಸಿದ್ದರು.ಆ ಭಾವಚಿತ್ರ ಉಪರಾಷ್ಟ್ರಪತಿಗಳರವರ ಅಮೃತ ಹಸ್ತದಿಂದ ಬಿಡುಗಡೆಯಾಯಿತು. ಆ ಕಲಾಕೃತಿ ನೋಡಿ ಉಪರಾಷ್ಟ್ರಪತಿಗಳು ಮೆಚ್ಚುಗೆ ವ್ಯಕ್ತಪಡೆಸಿದರು. ಆ ಕಾರ್ಯಕ್ರಮದಲ್ಲಿ ಕಲಾವಿದರಿಗೆ ಸನ್ಮಾನಿಸಲಾಯಿತು. ಒಬ್ಬ ಕಲಾವಿದರಿಗೆ ನಿಜವಾದ ಬಹುಮಾನವೆಂದರೆ, ಅವರ ಕಲೆಗೆ ಸಿಗುವ ಸನ್ಮಾನ. ಅವರು ಉಪರಾಷ್ಟ್ರಪತಿಗಳಿಂದ ಗೌರವಸನ್ಮಾನ ಪಡೆದದ್ದು ಅವರ ಜೀವನದ ಪ್ರಮುಖ ಘಟನೆಯಾಗಿದೆ ಎನ್ನುತ್ತಾರೆ ಶ್ರಿಯುತ ಸೋಮಶೆಟ್ಟಿಯವರು.

೯) ಭಾಲ್ಕಿಯ ಪರಮ ಪೂಜ್ಯ ಶ್ರೀ ಚನ್ನಬಸವ ಪಟ್ಟದೇವರು ಮತ್ತು ಶ್ರೀ ಭೀಮಣ್ಣಾ ಖಂಡ್ರೆಯವರು ಜೊತೆಗೂಡಿ, ಸೋಮಶೆಟ್ಟಿ ಅವರ ಮನೆಗೆ ಬಂದು ಅಕ್ಕಮಹಾದೇವಿಯವರ ಪೆಂಟಿಂಗ್ ಮಾಡಲಿಕ್ಕೆ ಹೇಳಿದರು. ಅವರ ಆಶಯದಂತೆ ಸುಂದರವಾಗಿ ಅಕ್ಕಮಹಾದೇವಿಯ ಭಾವಚಿತ್ರ ಬರೆದುಕೊಟ್ಟರು. ಕಲಾಕೃತಿಯಲ್ಲಿ ಇವರ ಕಲಾಶ್ರದ್ಧೆ ಮತ್ತು ಶರಣರ ಮೇಲಿನ ಭಕ್ತಿ ಪ್ರತೀಕತೆ ಎಲ್ಲವೂ ಎದ್ದು ಕಾಣುತ್ತಿತ್ತು. ಅದನ್ನು ಗಮನಿಸಿದ ಪೂಜ್ಯ ಪಟ್ಟದೇವರು, ಸೋಮಶೆಟ್ಟಿಯವರಿಗೆ ಅವರ ಕಲೆ ಶರಣರ ಭಾವಚಿತ್ರಗಳಿಗೆ ಮೀಸಲಿಡುವಂತೆ ಸೂಚಿಸಿ ಆಶಿರ್ವದಿಸಿದರಂತೆ.

ಕಲಾವಿದ ಸೋಮಶೆಟ್ಟಿಯವರ ತಂದೆ ಶತಾಯುಷಿ ಶೀ. ಭೀಮಣ್ಣಪ್ಪ ಅವರು ಬಸವಾದಿ ಶರಣರ ಮೇಲೆ ಅಪಾರ ಭಕ್ತಿ ಹೊಂದಿದವರಾಗಿದ್ದರು. ಬಸವ ತತ್ವವನ್ನು ಆಳವಾಗಿ ಅಭ್ಯಾಸ ಮಾಡಿದವರಾಗಿದ್ದರು. ತಮ್ಮ ಕಾಯಕದೊಂದಿಗೆ ಭಕ್ತಿದಾಸೊಹ ಮತ್ತು ಜಂಗಮ ಸೇವೆ ರೂಢಿಸಿಕೊಂಡಿದ್ದರು. ಆ ದಿನಗಳಲ್ಲಿ ಜಹಿರಾಬಾದಗೆ ಶರಣ ತತ್ವ ಪ್ರಚಾರ ಕಾರ್ಯಕ್ಕೆ ಹೋಗುತ್ತಿದ್ದ ಚೆನ್ನ ಬಸವ ಪಟ್ಟದ್ದೇವರು ಮತ್ತು ಇತರೆ ಜಂಗಮರಿಗೆ ಮನೆಗೆ ಬರಮಾಡಿಕೊಳ್ಳುತ್ತಿದ್ದರಂತೆ. ಅವರ ಸೇವೆ ಮಾಡುತ್ತಿದ್ದರು, ಅಲ್ಲದೆ ಅವರೊಡನೆ ಚಿಂತನೆ ಮತ್ತು ಅವರ ಕಾರ್ಯಗಳಲ್ಲಿ ಭಾಗಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಕರ್ನಾಟಕದ ಗಾಂಧಿ ಎನಿಸಿದ ಶರಣ ಶ್ರಿ ಹರ್ಡೇಕರ ಮಂಜಪ್ಪನವರು ಜೊತೆಗೂ ಕೂಡಿ ಶರಣ ತತ್ವ ಪ್ರಚಾರ ನಡೆಸುತ್ತಿದ್ದರು. ಉದಗೀರಿನಲ್ಲಿ ನಡೆದ ವೀರಶೈವ ಮಹಾಸಭೆಯ ಸಮ್ಮೇಳನದಲ್ಲಿ ಖಜಾಂಚಿಯಾಗಿದ್ದರಂತೆ. ಹೀಗೆ ಬಸವ ತತ್ವ ಸೇವೆಯಲ್ಲಿದ್ದ ಅವರ ತಂದೆಯವರು, ಸೋಮಶೆಟ್ಟಿಯವರಿಗೆ ಬಸವಣ್ಣನವರ ಜೀವನ ಚರಿತ್ರೆ ತಿಳಿಸುವ ಪೆಂಟಿಂಗ್‌ಗಳನ್ನು ಮಾಡಲಿಕ್ಕೆ ಸೂಚನೆ ನೀಡುತ್ತಿದ್ದರು. ಈ ಹಿನ್ನಲೆಯಲ್ಲಿ ಶ್ರಿಯುತರು ನಿವೃತ್ತಿ ನಂತರ ತಂದೆಯವರ ಇಚ್ಛೆಯಂತೆ ಬಸವಣ್ಣನವರ ಜೀವನ ಚರಿತ್ರೆ ಪೆಂಟಿಂಗ್ ಮಾಡಲು ನಿರ್ಧರಿಸಿದರು. ಪ್ರಾರಂಭ ಮಾಡುವುದಕ್ಕಿಂತ ಮೊದಲು ಬಸವಣ್ಣನವರ ಜೀವನ ಚರಿತ್ರೆ ಅಭ್ಯಾಸ ಮಾಡಿದರು. ಅಲ್ಲದೆ ಇತಿಹಾಸಕಾರರ ಮತ್ತು ಸಾಹಿತಿಗಳ ಜೊತೆಗೆ ಚರ್ಚೆ ವಿಮರ್ಶೆ ಮಾಡಿ ಜನರ ಅಭಿಪ್ರಾಯ ಪಡೆದರು. ಬಹು ಮುಖ್ಯವಾಗಿ ವಚನ ಸಾಹಿತ್ಯಾಧಾರ ಕೃತಿ ಸಂಗ್ರಹಿಸಿದರು. ಹೀಗೆ ಎಲ್ಲ ಮೂಲಗಳಿಂದ ಬಸವಣ್ಣನವರ ಜೀವನದ ಹಲವು ಘಟನೆಗಳನ್ನು ಸಂಗ್ರಹ ಮಾಡಿದರು. ಬಾಲ್ಯದಿಂದ ಲಿಂಗೈಕ್ಯದವರೆಗೆ ಪ್ರಮುಖ ಘಟನಾವಳಿಗಳ ಮೇಲೆ ಬೆಳಕು ಚೆಲ್ಲುವ ಕಲೆ ಜಲವರ್ಣದಲ್ಲಿ ಮೂಡಿಸಲಾರಂಬಿಸಿದರು. ಬಸವ ಜೀವನ ಚರಿತ್ರೆ ಕಲಾಕೃತಿಗಳಿಗೆ ಸಾರ ನೀಡುವ ಸಾಹಿತ್ಯವು ಅಷ್ಟೇ ಅವಶ್ಯವೆಂದು ತಿಳಿದು, ಬೆಂಗಳೂರಿನಲ್ಲಿ

ನೆಲೆಸಿರುವ ಇವರ ಮಿತ್ರರಾದ ಶ್ರೀ ಶಾಮಲಿಂಗ ಜವಳಿಯವರಿಗೆ ಗ್ರಂಥ ರಚನೆಗೆ ವಿನಂತಿಸಿದರು. ಜವಳಿವರು ಈ ಗ್ರಂಥಕ್ಕೆ ಸಾಹಿತ್ಯವನ್ನು ಅವರ ಮಿತ್ರರಾದ ಎಸ್.ಆರ್.ಆರ್. ಆರಾಧ್ಯರ ಜೊತೆಗೂಡಿ ಬರೆಯುತ್ತೇವೆ ಎಂದು ಒಪ್ಪಿದರಂತೆ. ಆ ಕಲೆ ಪುಸ್ತಕ ರೂಪದಲ್ಲಿ ಪ್ರಕಟಿಸುವ ಯೋಜನೆ ರೂಪಿಸಿಕೊಂಡಿದ್ದಾರೆ. ಈ ಕಾರ್ಯ ಸದ್ಯ ಪ್ರಗತಿಯಲ್ಲಿದೆ. ಬಸವಣ್ಣನವರ ಚರಿತ್ರೆ ಪೆಂಟಿಂಗ್‌ಗಳನ್ನೊಳಗೊಂಡ ಇವರ ಸಮಗ್ರ ಪೆಂಟಿಂಗ್‌ಗಳನ್ನು ಒಂದು ಆರ್ಟ್ ಗ್ಯಾಲರಿಯಲ್ಲಿ ಇಟ್ಟು, ಬಸವ ಸೇವೆ ಮಾಡುವ ಸದಾಶಯ ಹೊಂದಿದ್ದಾರೆ. ಈ ಯೋಜನೆಗೆ ಜಿಲ್ಲಾ ಯುವ ಬಸವ ಕೇಂದ್ರದ ಅಧ್ಯಕ್ಷರಾದ ಶ್ರೀ ಸುರೇಶ ಚೆನ್ನಶೆಟ್ಟಿ, ಜಿಲ್ಲಾ ಬಸವ ಕೇಂದ್ರದ ಅಧ್ಯಕ್ಷರಾದ ಶರಣಪ್ಪಾ ಮಿತಾರೆ, ಹಿರಿಯ ಕಲಾವಿದರಾದ ಡಾ॥ ಎ.ಎಸ್. ಪಾಟೀಲ್, ಕಲಾ ಗುರುಗಳಾದ ಡಾ॥ ಜೆ.ಎಸ್. ಖಂಡೇರಾವ, ಮಿತ್ರರಾದ ಯಶವಂತ ಹೆಬ್ಬಾರೆ, ಶ್ರೀಕಾಂತ ಬಿರಾದಾರ, ಚಂದ್ರಶೇಖರ ತೂಗಾ, ರಾಜಕುಮಾರ ಶಂಭು, ಅಲ್ಲದೇ ಬಸವ ಭಕ್ತರು, ಬಸವಾಭಿಮಾನಿಯರು ಹೀಗೆ ಅನೇಕರು ಪ್ರೋತ್ಸಾಹ ನೀಡುವ ಭರವಸೆ ವ್ಯಕ್ತಪಡಿಸಿರುವ ವಿಷಯತಿಳಿದು ಬರುತ್ತದೆ.

ಕಲಾಸೇವೆಯೊಂದಿಗಿನ ಸಾಮಾಜಿಕ ಕಾರ್ಯ :

ಶ್ರೀ ಸೋಮಶೆಟ್ಟಿಯವರ ಜೀವನ ಅವರನ್ನು ಕೇವಲ ಕಲಾ ಸೇವೆಗಷ್ಟೇ ಸೀಮಿತಗೊಳಿಸದೆ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸೇವೆಯಲ್ಲಿ ತೊಡಗುವಂತೆ ಮಾಡಿತು. ಹಾಗಾಗಿ ಶ್ರೀಯುತರು ಶಾಲಾ ಅವಧಿಯ ನಂತರ ಸಾಯಂಕಾಲ ಸಾಯಿನ್ ಬೋರ್ಡ್ ಬರೆಯುವುದು, ಗಾಂಧಿ ಗಂಜ ಹತ್ತಿರದ ಲಿಥೋಪ್ರೆಸ್ ನಲ್ಲಿ, ಕಲ್ಲಿನ ಮೇಲೆ ಡಿಝೈಯಿನ್ ತೆಗೆಯುವ ಕೆಲಸ ಮಾಡುತ್ತಿದ್ದರು. ಜಿಲ್ಲೆಯ ಸಾಹಿತಿಗಳಿಂದ ಹೊಸದಾಗಿ ರಚಿತವಾದ ಪುಸ್ತಕಗಳ ಮುಖ ಪುಟಕ್ಕಾಗಿ ಪ್ರಿಂಟ್ ಮಾಡಲು ಅದರ ಮೇಲೆ "ಡಿಝೈಯಿನ್" ಚಿತ್ರ ತೆಗೆಯುತ್ತಿದ್ದರು. ಹೀಗೆ ಹಲವು ಬಗೆಯ ಆಯಾಮಗಳಲ್ಲಿ ನಾಡು ನುಡಿಗೆ ಸೇವೆ ಸಲ್ಲಿಸುತ್ತಾ ಬಂದಿರುತ್ತಾರೆ.

ಬೀದರ ಗಡಿ ನಾಡಾದ ಪ್ರಯುಕ್ತ ಮರಾಠಿ, ತೆಲಗು ಮತ್ತು ಉರ್ದು ಭಾಷೆಯ ಹಾಗೂ ಸಂಸ್ಕೃತಿಯ ಪ್ರಭಾವ ಹೆಚ್ಚಾಗಿ ಇತ್ತು. ಇಲ್ಲಿ ಕನ್ನಡ ವಾತಾವರಣ ದಟ್ಟಗೊಳಿಸುವ ನಿಟ್ಟಿನಲ್ಲಿ ಜಿಲ್ಲೆಯ ಸಾಹಿತ್ಯಾಸಕ್ತರಿಂದ ಕನ್ನಡ ಸಾಹಿತ್ಯ ಸಂಘ ಸ್ಥಾಪನೆಗೊಂಡಿತು. ಅಲ್ಲಿ ಪ್ರತಿ ರವಿವಾರ ಸಾಹಿತ್ಯದ ಚರ್ಚೆ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಕಾರ್ಯಕ್ರಮದ ಪ್ರಚಾರ ಮಾಡಲಿಕ್ಕೆ, ಅವರು ಹಾಳೆಯ ಮೇಲೆ ಅಂದಿನ ಕಾರ್ಯಕ್ರಮ ಆಮಂತ್ರಣ ಬರೆದು ಶಾಲಾ-ಕಾಲೇಜು ಮತ್ತು ಕಛೇರಿ ಮುಂತಾದ ಸ್ಥಳಗಳಿಗೆ ಹೋಗಿ ಗೋಡೆಗೆ ಅಂಟಿಸಿ ಬರುತ್ತಿದ್ದರು. ಕಾರ್ಯಕ್ರಮದಲ್ಲಿ ಚರ್ಚೆ ಯಾಗಲಿರುವ ಸಾಹಿತಿಗಳ ಭಾವಚಿತ್ರ ಜಲವರ್ಣದಲ್ಲಿ ಬರೆದು ಕೊಡುತ್ತಿದ್ದರು. ಜೊತೆಗೆ ಪ್ರಮುಖ ರಸ್ತೆಗಳ ಬದಿಗಳಲ್ಲಿ ಕಾರ್ಯಕ್ರಮದ ಬ್ಯಾನರ್ ಬರೆದು ಕಟ್ಟುವ ಕೆಲಸವೂ ಅವರಿಂದ ಆಗಿರುವುದಿದೆ. ಕವಿಗಳ ಹಾಗೂ ಸಾಹಿತಿಗಳ ಭಾವಚಿತ್ರಗಳನ್ನು ಬಿಡಿಸಿವುದು ಮತ್ತು ಕನ್ನಡ ಸಾಹಿತ್ಯ ಸಂಘದ ಪ್ರಚಾರ ಪೇಪರನಲ್ಲಿ ಬರೆದು ಹಂಚುವುದು ಹೀಗೆ ಸಾಹಿತ್ಯ ಕ್ಷೇತ್ರಕ್ಕೆ ಪರೋಕ್ಷ ಸೇವೆ ಗೈದಿರುತ್ತಾರೆ. ಯಾವುದೇ ಪ್ರತಿಫಲಾಪೇಕ್ಷವಿಲ್ಲದೇ ಸದ್ದಿಲ್ಲದೇ ಸೇವೆ ಸಲ್ಲಿಸುತ್ತಿದ್ದಾರೆ.

೭೦ರ ದಶಕದಲ್ಲಿ ಜಿಲ್ಲೆಯಲ್ಲಿಯ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಜರುಗುವ ಕಾರ್ಯಕ್ರಮಳನ್ನು, ಆ ಸಂದರ್ಭದಲ್ಲಿ ಅವರು ಬಟ್ಟೆಯ ಮೇಲೆ ಕಾರ್ಯಕ್ರಮದ ವಿವರ ಬರೆದು ಹಚ್ಚವುದು, ಪೇಪರ್ ಮೇಲೆ ಬರೆದು ಕೊಡುವುದು ಹೀಗೆ ವೈಭವದಿಂದ ಉತ್ಸವ ನೆರವೇರುವಂತೆ ದುಡಿಯುತ್ತಿದ್ದರು. ೧೯೭೫ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಬೀದರನಲ್ಲಿ ಜರುಗಿದ್ದಾಗ ಅದರಲ್ಲಿ ಇವರು ಸಲ್ಲಿಸಿರುವ ಸೇವೆ ಮಹತ್ತರದು. ಈ ಕಲೆಯೊಂದಿಗೆ ಕನ್ನಡ ಸಾಹಿತ್ಯಕ್ಕೂ ಸಲ್ಲಿಸಿರುವ ಸೇವೆ ಸದಾಕಾಲ ಸ್ಮರಣೀಯ.

ಸುಂದರವಾಗಿ ಕನ್ನಡದ ಪೋಸ್ಟರಗಳನ್ನು ಮತ್ತು ಬ್ಯಾನರ್‌ಗಳನ್ನು ಬರೆಯುವುದರಲ್ಲಿ ಸೋಮಶೆಟ್ಟಿಯವರದು ಸಿದ್ಧಹಸ್ತ. ಕಾರ್ಯಕ್ರಮಗಳ

ವೇದಿಕೆ ನಿರ್ಮಿಸುವುದು, ರಸ್ತೆಗಳಿಗೆ ಕಮಾನುಗಳನ್ನು ಹಾಕುವುದು ಮುಂತಾದ ಕ್ಷೇತ್ರಗಳಲ್ಲಿ ಸಕ್ರೀಯ ಪಾತ್ರವಹಿಸುವ ಮೂಲಕ ಮಾರ್ಗದರ್ಶನ ನೀಡುತ್ತಿದ್ದರು. ವಿಶೇಷ ಕಾರ್ಯಕ್ರಮಗಳ ಸಂದರ್ಭಗಳಲ್ಲಿ ಅಂದರೆ ಕನ್ನಡ ರಾಜ್ಯೋತ್ಸವ, ಸ್ವಾತಂತ್ರ್ಯೋತ್ಸವ ಹಾಗೂ ಗಣರಾಜ್ಯೋತ್ಸವ ಸಂದರ್ಭಗಳಲ್ಲಿ ಸ್ತಬ್ದ ಚಿತ್ರಗಳನ್ನು ನಿರ್ಮಿಸಿ ಮೆರವಣಿಗೆಯಲ್ಲಿ ಪ್ರದರ್ಶಿಸುವ ಜವಬ್ದಾರಿ ಹೊತ್ತು, ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದರು ಎಂದು ಜಿಲ್ಲೆಯ ಹಿರಿಯ ಸಾಹಿತಿಗಳು ಮತ್ತು ಪತ್ರಕರ್ತರಾದ ಶ್ರೀ ಹಣಮಂತಪ್ಪಾ ಪಾಟೀಲ್ ರವರ ಲೇಖನದಿಂದ ತಿಳಿದು ಬಂದ ಸಂಗತಿಗಳು.

ಬಸವ ಮಂಟಪ ಬೀದರದಲ್ಲಿ ಪ್ರತಿ ರವಿವಾರ ಪ್ರಾರ್ಥನೆ ನಡೆಯುತ್ತಿತ್ತು. ಪ್ರಾರ್ಥನೆ ಮುಗಿದ ನಂತರ ವಾರಕ್ಕೊಬ್ಬ ಶರಣರ ಬದುಕು-ಸಾದನೆ ಕುರಿತು ಅನುಭಾವ ನಡೆಸಲಾಗುತ್ತಿತ್ತು. ಆ ಕಾರ್ಯಕ್ರಮಗಳಿಗೆ ಸೋಮಶೆಟ್ಟಿಯವರು ಶಿವಶರಣರ ಭಾವಚಿತ್ರ ಮೊದಲೆ ಪೆಂಟಿಂಗ್ ಮಾಡಿಕೊಂಡು, ಅಲ್ಲಿ ಪ್ರದರ್ಶಿಸುತ್ತಿದ್ದರು. ಇದು ಅನುಭಾವ ನಿವೇದಕರಿಗೆ ಮನಮುಟ್ಟುವಂತೆ ಅನುಭಾವ ನೀಡಲು ಅನುವಾಗುತ್ತಿತ್ತಂತೆ. ಅಲ್ಲದೆ ಈ ತರಹ ಬಸವ ಮಂಟಪದಲ್ಲಿ ೬೫ ಶಿವಶರಣರ ಭಾವ ಚಿತ್ರಗಳು ಜಲವರ್ಣ, ತೈಲವರ್ಣದಲ್ಲಿ ರಚಿಸಿ ಕಾಣಿಕೆ ರೂಪದಲ್ಲಿ ಕೊಟ್ಟಿರುತ್ತಾರೆ. ಈಗಲೂ ಆ ಕಲೆಗಳು ಬಸವ ಮಂಟಪದಲ್ಲಿ ನೋಡಲು ಸಿಗುತ್ತವೆ. ಅಲ್ಲದೇ ಇಂದಿಗೂ ಪ್ರತಿ ವರ್ಷ ಆಚರಿಸಲಾಗುವ ಬಸವ ಜಯಂತಿಯಲ್ಲಿ, ತೈಲವರ್ಣ ಬಳಸಿ ಇವರು ಬಿಡಿಸಿರುವ ಬಸವಣ್ಣನವರ ಭಾವಚಿತ್ರ ಮೆರವಣಿಗೆ ಮಾಡಲಾಗುತ್ತಿದೆ.

ಶ್ರೀ ಶಾಮಲಿಂಗ ಜವಳಿಯವರು ಗಾಂಧಿಗಂಜ ಹತ್ತಿರ ಒಂದು ಪ್ರಿಂಟಿಂಗ್ ಪ್ರೇಸ್ ನಡೆಸುತ್ತಿದ್ದರು. ಆಗ ಸೋಮಶೆಟ್ಟಿಯವರು ಪ್ರತಿದಿನ ಅಲ್ಲಿ ಅವರೊಂದಿಗೆ ಬಸವಣ್ಣನವರ ವಚನಗಳ, ಸಮಾಜಿಕ ಮತ್ತು ಧಾರ್ಮಿಕ ಕಾರ್ಯಗಳ ಕುರಿತು ಚರ್ಚೆ ಮಾಡುತ್ತಿದ್ದರಂತೆ. ಅಲ್ಲಿ ಪ್ರಿಂಟ್

ಆಗುವ ಪುಸ್ತಕಗಳಿಗೆ ಅವಶ್ಯಕವಿರುವ ಶಿವಶರಣರ ರೇಖಾಚಿತ್ರ ಬಿಡಿಸಿ ಕೊಡುತ್ತಿದ್ದರಂತೆ. ಹೀಗೆ ಇವರು ಬಿಡಿಸಿರುವ ಎಲ್ಲಾ ರೇಖಾಚಿತ್ರಗಳನ್ನು ಕ್ರೂಢೀಕರಿಸಿ ಶಿವಶರಣರ ರೇಖಾಚಿತ್ರಗಳ ಒಂದು ಪುಸ್ತಕ ಪ್ರಕಟಣೆ ಮಾಡಲು ಜವಳಿಯವರು ತಿಳಿಸಿದಾಗ ಶ್ರೀಯುತರು ಒಪ್ಪಿ **"ಶರಣರ ದರ್ಶನ"**ವೆಂಬ ಪುಸ್ತಕ ಪ್ರಕಟ ಮಾಡಿದ್ದು ಈಗ ಇತಿಹಾಸ. ಅದನ್ನು ಕಂಡು ಶ್ರೀಯುತ ಸ್ವ. ಖಡ್ಕೆಯವರು ತುಂಬು ಹೃದಯದಿಂದ ಹೊಗಳಿದ್ದರು. ಅಲ್ಲದೇ ಲಿಂಗಾನಂದ ಸ್ವಾಮಿಯವರ ಹತ್ತಿರವಿದ್ದ ಪೇಟಿ ಮಾಸ್ತರ ಶ್ರೀ ಸಿದ್ರಾಮಣ್ಣ ನವರು ಈ ಪುಸ್ತಕ ನೋಡಿ "ಈ ಗ್ರಂಥ ಸಾಧಾರಣ ಗ್ರಂಥವಲ್ಲ, ಇದನ್ನು ಆನೆಯ ಮೇಲೆ ಇಟ್ಟು ಮೆರವಣಿಗೆ ಮಾಡುವಂಥ ಗ್ರಂಥವೆಂದು" ಗುಣಗಾನ ಮಾಡಿದರಂತೆ ಈ ಸಂಗತಿಯು ಇವರ ಕಲಾ ಪ್ರತಿಭೆ ಅಲ್ಲದೆ ಶರಣ ಧರ್ಮಕ್ಕೆ ಸಲ್ಲಿಸಿದ ಸೇವೆ ಅನಾವರಣಗೊಳಿಸುತ್ತದೆ.

ಇದಾದ ಕೆಲವು ದಿವಸಗಳ ನಂತರ ಮತ್ತೆ ಶಾಮಲಿಂಗ ಜವಳಿಯವರೊಂದಿಗೆ ಕೂಡಿಕೊಂಡು ಬಸವತತ್ವ ಪದ್ಧತಿಯಲ್ಲಿ ವಿವಾಹ ಬಗ್ಗೆ ಚರ್ಚಿಸಿ, ಬಸವ ತತ್ವ ವಿಧಾನದಲ್ಲಿ ವಿವಾಹ ನೆರವೇರಿಸಲು ಅನುಕೂಲವಾಗುವಂತೆ ವಿವಾಹ ವಿಧಿ ವಿಧಾನ ಒಳಗೊಂಡ **"ಕಲ್ಯಾಣ ವಿವಾಹ"** ಎಂಬ ಬಸವ ತತ್ವ ಪ್ರಕಾರ ಮದುವೆ ವಿಧಿ ವಿಧಾನಗಳ ಗ್ರಂಥ ಪ್ರಕಟಣೆಗೆ ಸಿದ್ಧಗೊಳಿಸಿದರು. ಇದು ಇವರು ಮಾಡಿದ ಕಲಾ ಸೇವೆಯೊಂದಿಗೆ, ಸಾಹಿತ್ಯಿಕ ಮತ್ತು ಧಾರ್ಮಿಕ ಸೇವೆಗೆ ಇನ್ನೊಂದು ನಿದರ್ಶನವಾಗಿದೆ.

ಸಮಕಾಲಿನರ ದೃಷ್ಟಿಯೊಳಗೆ ಕಲಾವಿದ ಸೋಮಶೆಟ್ಟಿ :

ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಅವರ ನಡೆ – ನುಡಿ ಮತ್ತು ಅವರ ಸಾಧನೆ–ಸೇವೆ ಅವರ ವೀಚಾರ–ಆಚಾರಗಳಿಂದ ತಿಳಿಯಬಹುದು. ಇವೆಲ್ಲವು ಅವರ ವಯಕ್ತಿಕತೆಗೆ ಸಂಭಂಧಿಸಿದ್ದು. ಆದರೆ ಆ ವ್ಯಕ್ತಿ ಸಮಾಜದೊಂದಿಗೆ ಜೋಡಿಸಿಕೊಂಡ ಮತ್ತು ಸ್ಪಂದಿಸುವ ಪರಿಯೂ ಮುಖ್ಯವಾದದ್ದು. ಲಿಂಗದ ಬಾಯಿ ಜಂಗಮ ವೆಂಬ ಶರಣರ ಮಾತಿನಂತೆ, ಒಬ್ಬರ ವ್ಯಕ್ತಿತ್ವ ಅವರ ಸಮಕಾಲಿಗರ ಮುಖದಿಂದ ಅರಿತಾಗ ಅರಿವಿನ ವ್ಯಾಪ್ತಿ ಹೆಚ್ಚುತ್ತದೆ. ಈ ಕಾರಣ ಅವರ ಕಲಾಗುರುಗಳಾದ ಶ್ರೀ ಜೆ.ಎಸ್. ಖಂಡೇರಾವ, ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು, ಅವರನ್ನು ಹತ್ತಿರದಿಂದ ಕಂಡ ಹಿರಿಯ ಸಾಹಿತಿಗಳೂ ಆದ ಶ್ರೀ ಪಂಚಾಕ್ಷರಿ ಪುಣ್ಯಶೆಟ್ಟಿ, ಶ್ರೀ ಹಣಮಂತಪ್ಪಾ ಪಾಟೀಲ್‌ರವರಿಂದ ಮತು ಶ್ರೀ.ಹೆಚ್.ಎಸ್. ಖಡ್ಕೇಯವರಿಂದ ಇವರ ಕುರಿತಾದ ವಿಚಾರ ಪಡೆಯಲಾಗಿದೆ. ಅಲ್ಲದೆ ಕನ್ನಡ ಪ್ರಾಧ್ಯಾಪಕರು ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಬೀದರನ ಗೌರವ ಕಾರ್ಯದರ್ಶಿಗಳಾದ ಶರಣ ಜೀವಿ ಡಾ.ಬಸವರಾಜ ಬಲ್ಲೂರ ರವರು ಮತ್ತು ಸೋಮಶೆಟ್ಟಿಯವರನ್ನು ಗುರುಗಳಂತೆ ಭಾವಿಸುವ ಹಿರಿಯ ಕಲಾ ಶಿಕ್ಷಕ ಶ್ರೀ ಶ್ರೀಕಾಂತ ಬೀರಾದರ ರವರು ಶ್ರೀಯುತರ ಕುರಿತು ಅನಿಸಿಕೆಗಳನ್ನು ವ್ಯಕ್ತಪಡಿಸಿರುತ್ತಾರೆ.

೧. **ಕಲಾವಿದ ಶ್ರೀ ಚಂದ್ರಶೇಖರ ಸೋಮಶೆಟ್ಟಿ**ಯವರು ಬಸವಣ್ಣನವರ ಜೀವನ ಮತ್ತು ಅವರು ಜಗತ್ತಿಗೆ ಕೊಟ್ಟ ಕೊಡುಗೆ ಹಾಗೂ ಮಾನವ ಜೀವನದ ಮಹಾ ಮೌಲ್ಯವನ್ನು ರೂಪಿಸಿದ ಇಂಥಹ ಅನೇಕ ವಿಷಯಗಳನ್ನು ತಮ್ಮದೇ ಆದ ಶೈಲಿಯಲ್ಲಿ ವಾಸ್ತವಿಕ ಹಿನ್ನಲೆಯಲ್ಲಿ ಕೃತಿಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಅವನ್ನು ವೀಕ್ಷಿಸಿದಾಗ ಕಲಾತ್ಮಕ ದೃಷ್ಟಿಯಿಂದ ಹೇಳಬೇಕಾದರೆ ಚಿತ್ರ ಸಂಯೋಜನೆ ಮತ್ತು ವರ್ಣ ಹೊಂದಾಣಿಕೆ ವಿಷಯಕ್ಕೆ

ಅನುಗುಣವಾಗಿ ಅಳವಡಿಸಿ ನಿರೂಪಿಸಿರುವುದು ತುಂಬಾ ಅರ್ಥಪೂರ್ಣವೆನಿಸುತ್ತದೆ. ಅವರು ಜಲವರ್ಣ ಹಾಗೂ ತೈಲವರ್ಣ ಮಾಧ್ಯಮವನ್ನು ಬಳಸಿರುವರು. ಕಲಾಕೃತಿಗಳು ಸರಳ ತಂತ್ರ ವಿಧಾನದಿಂದ ಕೂಡಿದ್ದಾಗಿವೆ. ಸ್ಥಳ ಅವಕಾಶವು ಜನ ಸಾಮಾನ್ಯರಿಗೆ ಮನ ಸೆಳೆಯುವಂತೆ ಸಂಯೋಜಿಸಿದ್ದು ವಿಶಿಷ್ಟವಾಗಿದೆ. ಇದೇ ರೀತಿ ನಿರಂತರ ಮುಂದುವರಿಸುತ್ತಾ ಹೋದಲ್ಲಿ ಅವರ ಕಲಾ ಕೃತಿಗಳು ಒಳ್ಳೆ ಮಟ್ಟಕ್ಕೆ ಬೆಳೆಸಿಕೊಳ್ಳಲು ಸಾಧ್ಯವಿದೆ ಎಂದು ಅನಿಸುತ್ತದೆ. ದೇವರು ಅವರಿಗೆ ಹೆಚ್ಚಿನ ರೀತಿಯಲ್ಲಿ ಅರವಿನ ಸಾಮರ್ಥ್ಯ ಹೆಚ್ಚಿಸಬೇಕೆಂದು ಪ್ರಾರ್ಥಿಸುವೆ.

(ಸಂದರ್ಶಕರ ಡೈರಿಯಿಂದ)

ಜೆ.ಎಸ್. ಖಂಡೇರಾವ, ಕಲಬುರ್ಗಿ

೨. ಇಂದು ಶ್ರೀ ಸೋಮಶೆಟ್ಟಿಯವರು ಮಾಡಿದ ಬಸವಣ್ಣನವರ ಸಮಗ್ರ ಜೀವನ ಕುರಿತು ಚಿತ್ರಗಳನ್ನು ನೋಡಿದ ತಕ್ಷಣ ಹೃದಯ ತುಂಬಿ ಬಂತು. ಮನಸ್ಸು ಆನಂದದಿಂದ ತುಂಬಿಕೊಂಡಿತು. ಇಲ್ಲಿಯವರೆಗೆ ಯಾರೂ ಮಾಡಲಾರದ ಕಾರ್ಯ. ಇತಿಹಾಸ ನಿರ್ಮಾಣದ ಕೆಲಸ. ಇದೊಂದು ಐತಿಹಾಸಿಕ ಕಾರ್ಯ. ಶ್ರೀ ಸೋಮಶೆಟ್ಟಿಯವರ ಅಂತರಂಗದಲ್ಲಿ ಸಮಗ್ರ ಶರಣ ಬಳಗ, ಅನುಭವ ಮಂಟಪ ಬಳಗ ತುಂಬಿ ಹೋಗಿದೆ. ಒಳಗೆ ಇದ್ದದ್ದು ಕ್ರಿಯಾರೂಪಕ್ಕೆ ಬರುತ್ತಿರುವುದು ಇದೊಂದು ಅದ್ಭುತ ಕಾರ್ಯ. ಇತಿಹಾಸ ಉಳಿಸುವ ಕಾರ್ಯ.ಈ ಕಾರ್ಯ ಬೇಗನೆ ಮುಗಿಯುವ ಹಾಗೆ ಆಗಲಿ. ಹೊಸ ಸೂಕ್ತವಾದ ಕಾರ್ಯಕ್ಕೆ ಸಮಸ್ತ ಬಸವ ಭಕ್ತರು ತಮಗೆ ಚಿರಋಣಿಯಾಗಿರಲೇಬೇಕು.

ದಿ. ೧೫.೧೨.೨೦೧೦. **(ಸಂದರ್ಶಕರ ಡೈರಿಯಿಂದ)**

ಬಸವಲಿಂಗ ಪಟ್ಟದ್ದೇವರು, ಹಿರೇಮಠ ಸಂಸ್ಥಾನ, ಭಾಲ್ಕಿ

೩. ನಿಮ್ಮ ನೋಟವನಂತ ಸುಖ, ನಿಮ್ಮ ಕೂಟ ಪರಮಸುಖ.
ಅವಟುಕೋಟಿ ರೋಮಂಗಳು ಕಂಗಳಾಗಿ ನೋಡುತ್ತಿದ್ದೆನು.
ಕೂಡಲ ಸಂಗಮದೇವಯ್ಯಾ, ನಿಮ್ಮ ನೋಡಿ ನೋಡಿ
ಮನದಲ್ಲಿ ರತಿ ಹುಟ್ಟಿ,
ನಿಮಿರ್ದವೆನ್ನ ಕಳೆಗಳು.

ಬಸವಣ್ಣನವರ ಈ ವಚನದಲ್ಲಿ ಲಿಂಗಾರ್ಚನೆಯಲ್ಲಿ ಅವರಿಗೆ ಉಂಟಾಗುವ ಆನಂದದ ಬಗ್ಗೆ ವರ್ಣಿಸಲಾಗಿದೆ. ಲಿಂಗವನ್ನು ನೋಡುವ ಆಗಿನ ದೃಶ್ಯದ ವರ್ಣನೆಯನ್ನು ಮಾಡುವುದಕ್ಕೆ ಅವರು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಇದೇ ರೀತಿಯ ಅನುಭವವನ್ನು ನನಗೆ ಚಂದ್ರಶೇಖರ ಸೋಮಶೆಟ್ಟಿಯವರು ಚಿತ್ರಿಸಿದ ಶರಣರ ಚಿತ್ರಗಳನ್ನು ನೋಡುವಾಗ ಉಂಟಾಯಿತು.

(ಸಂದರ್ಶಕರ ಡೈರಿಯಿಂದ)
ಶ್ರೀ ಪಂಚಾಕ್ಷರಿ ಪುಣ್ಯಶೆಟ್ಟಿ, ಬೀದರ

೪. ಚಿತ್ರಕಲೆ ಕ್ಷೇತ್ರದಲ್ಲಿ ಕೃಷಿ ಮಾಡುವವರು ಅತಿ ಕಡಿಮೆ. ಜಿಲ್ಲೆಯ ವಿರಳ ಕಲಾವಿದರಲ್ಲಿ ಹಿರಿಯರಾದ ಶ್ರೀಯುತ ಚಂದ್ರಶೇಖರ ಸೋಮಶೆಟ್ಟಿಯವರು ತಮ್ಮ ಕಲೆಯ ಮೂಲಕ ಬೀದರ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಇವರು ಮಾಡಿರುವ ಕಲಾಕೃತಿಗಳು ಚಿತ್ರಕಲಾ ವಿದ್ಯಾರ್ಥಿಗಳಿಗೆ ಜ್ಞಾನದ ದೀಪಗಳಾಗಿ ಬೆಳಗುತ್ತಿವೆ. ಕಲೆಯನ್ನು ಆದಾಯದ ಮೂಲವನ್ನಾಗಿ ಮಾಡಿಕೊಳ್ಳದೆ ಆದರ್ಶದ ಮೂಲವಾಗಿರಿಸಿಕೊಂಡ ಈ ಕಲಾವಿದರು ಸರಳ ಸ್ವಭಾವದ ಸಾದಾ ಜೀವಿಗಳು. ಅವರು ಹಾಕಿಕೊಂಡ "ವಿಶ್ವ ಗುರುಬಸವಣ್ಣನವರ ಜೀವನ ದರ್ಶನ" ಚಿತ್ರಗಳು ನಗರದಲ್ಲಿ ದೊಡ್ಡದೊಂದು ಮ್ಯೂಜಿಯಂನಲ್ಲಿ

ಪ್ರದರ್ಶನವಾಗಿರಿಸುವ ಯೋಜನೆ ಶೀಘ್ರದಲ್ಲಿ ಪೂರ್ಣಗೊಳ್ಳಲೆಂದು ಹಾರೈಸುತ್ತೇನೆ.

(ಸಂದರ್ಶಕರ ಡೈರಿಯಿಂದ)

ಶ್ರೀ ಹಣಮಂತಪ್ಪಾ ಪಾಟೀಲ್, ಬಸವ ನಗರ, ಬೀದರ.

೫. ಆತ್ಮೀಯ ಮಿತ್ರರಾದ **ಶ್ರೀ ಚ.ಭಿ. ಸೋಮಶೆಟ್ಟಿ**ಯವರ ಬಹು ದಿನಗಳ ಅನಿರೀಕ್ಷಿತ ಭೇಟಿ ಸಂತಸ ತಂದಿದೆ. ಕ್ರಿಯಾತ್ಮಕ ಮತ್ತು ಸೃಜನಶೀಲ ಚಿತ್ರಕಲಾವಿದರಾದ ಇವರು ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮಹತ್ವದ ದಾಖಲೆಯ ಕೆಲಸ ಮಾಡುತ್ತಿರುವುದು ನಿಜಕ್ಕೂ ಖುಷಿ ತಂದಿದೆ. ಬಸವಣ್ಣನವರ ಸಮಗ್ರ ಬದುಕಿನ ಶರಣ ದರ್ಶನ ತಮ್ಮ ಚಿತ್ರಗಳ ಮೂಲಕ ಮಾಡಿಸುವ ಪರಿ ಅದ್ಭುತವಾಗಿದೆ.

ಚಿತ್ರಗಳಲ್ಲಿ ಜೀವಂತಿಕೆ ಇದ್ದು ನಳನಳಿಸುತ್ತೀವೆ. ಬಸವಣ್ಣನವರ ಭವ್ಯ ಬದುಕು ಶ್ರೀಸಾಮಾನ್ಯರಿಂದ ಹಿಡಿದು ಮೇಧಾವಿಗಳಿಗೆ ಪರಿಚಯಿಸುವ ಕಾರ್ಯ ಶ್ಲಾಘನೀಯ. ಕಲಾಕೃತಿ ಮತ್ತು ಸೂಕ್ಷ್ಮತೆಯಿಂದೊಡಗೂಡಿರುವ ಇವರ ಚಿತ್ರಗಳು ಮೂಕ ವಿಸ್ಮಿತರನ್ನಾಗಿಸುತ್ತವೆ. ಕಲಾ ಜಗತ್ತಿನ ಹೃದಯ ಬಾಗಿಲನ್ನು ತಟ್ಟುತ್ತದೆ. ಜೀವನೋತ್ಸಾಹ ಹುಟ್ಟಿಸುತ್ತವೆ. ಜಗಜ್ಯೋತಿ ಬಸವಣ್ಣನವರ ಸಮಗ್ರ ಬದುಕನ್ನು ಚಿತ್ರಿಸಿ ಪುಸ್ತಕ ರೂಪದಲ್ಲಿ ಕೊಡುವ ಅವರ ಪ್ರಯತ್ನ ನಿಜಕ್ಕೂ ಪ್ರಶಂಸನೀಯ.

ಪ್ರತಿಭೆ, ಶ್ರಮ, ಗಳಿಕೆ ಎಲ್ಲವನ್ನು ಧಾರೆಯೆರೆದು ಬಸವಣ್ಣನವರನ್ನು ಜಗತ್ತಿಗೆ ಕಾಣಿಕೆಯಾಗಿ ನೀಡುತ್ತಿರುವ ಅವರ ಅಪ್ರತಿಮ ವ್ಯಕ್ತಿತ್ವಕ್ಕೆ ನಾನು ತಲೆಬಾಗುತ್ತೇನೆ.

(ಸಂದರ್ಶಕರ ಡೈರಿಯಿಂದ)

ಶ್ರೀ.ಹೆಚ್. ಎಸ್. ಖಡ್ಕೇ, ಖಡ್ಕೆ ಪತ್ರಿಕೆ ಪ್ರಕಾಶನ ಬೀದರ.

೬. ಸರಳತೆ ಸಜ್ಜನಿಕೆಗೆ ಹೆಸರಾದ ಸೋಮಶೆಟ್ಟಿ ಅವರದ್ದು ಅಪರೂಪದ ವ್ಯಕ್ತಿತ್ವ. ಪಂಚ ಕಲೆಗಳಲ್ಲಿ ಒಂದಾದ ಚಿತ್ರಕಲೆ ಅವರ ಬದುಕಿನ ಅಂತಃ ಶಕ್ತಿ. ತಮ್ಮ ಇಡೀ ಬದುಕನ್ನೇ ಕಲಾಕೃತಿಗಾಗಿ ಮೀಸಲಿಟ್ಟ ಕಲಾ ದಾರ್ಶನಿಕರು. ಅವರ ಒಂದೊಂದು ಕಲಾಕೃತಿ ಅಸಾಧಾರಣ ಪ್ರತಿಭೆಯನ್ನು ಅನಾವರಣ ಗೊಳಿಸುತ್ತವೆ. ಬಸವಾದಿ ಶರಣರಿಂದ ಪ್ರಭಾವಿತರಾದ ಅವರ ಬಹುತೇಕ ಕಲಾಕೃತಿಗಳು ಶರಣತತ್ವ ಕೇಂದ್ರಿತವಾಗಿವೆ. ಹರಿಹರ ಶಿವನಿಗೆ ನಾಲಿಗೆ ಮಾರಿಕೊಂಡಂತೆ ತಮ್ಮ ಕಲೆಯನ್ನು ಬಸವಾದಿ ಶರಣರಿಗೆ ಮೀಸಲಿಟ್ಟಂತೆ ಭಾಸವಾಗುತ್ತದೆ. ಬಸವಣ್ಣನವರ ಜೀವನ ಚರಿತ್ರೆ ಆಧಾರಿತ ಪ್ರಮುಖ ಘಟನಾವಳಿಗಳ ಕೇಂದ್ರಿತ ನೂರಾರು ಕಲಾಕೃತಿಗಳೇ ಈ ಹೇಳಿಕೆಗೆ ಸಾಕ್ಷಿ. ಅವರು ಕೇವಲ ಕಲಾವಿದರಾಗಿ ವೈಯಕ್ತಿಕ ಕಲಾ ಪ್ರದರ್ಶನಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳದೆ, ಈ ಭಾಗದ ಬಹುತೇಕ ಸಾಹಿತಿಗಳ ಪುಸ್ತಕಗಳಿಗೆ ಮುಖಪುಟ ಮಾಡಿಕೊಡುವ ಮೂಲಕ ಸಾಹಿತ್ಯ ಲೋಕದ ಶ್ರೀಮಂತಿಕೆಗೂ ಕಾರಣರಾಗಿ ಈ ಭಾಗದ ಸಾಹಿತಿಗಳಿಗೆ ಪ್ರೋತ್ಸಾಹಿಯಾಗಿ ನಿಂತಿದ್ದಾರೆ. ಅವರೊಬ್ಬ ಅಸಾಧಾರಣ ಕಲಾವಿದರಾಗಿದ್ದು ಕಲೆ ಸಾಹಿತ್ಯದ ಸಾಂಸ್ಕೃತಿಕ ರಾಯಭಾರಿಗಳಾಗಿದ್ದಾರೆ. ಅವರಿಂದ ಇನ್ನೂ ಹೆಚ್ಚಿನ ಕಲಾಕೃತಿಗಳು ಹೊರಬರಲೆಂದು ಶುಭಹಾರೈಸುವೆ

– ಡಾ. ಬಸವರಾಜ ಬಲ್ಲೂರ, ಬೀದರ

೭. ಮಾನವ ಸಮಾಜಕ್ಕೆ ಉಪಯುಕ್ತ ಮಾರ್ಗ ನೀಡುವ ಮಾರ್ಗದರ್ಶಕ ಕಲೆ, ಸಾಹಿತ್ಯ, ಸಾಂಸ್ಕೃತಿಕ ಬದುಕಿನ ಜೀವಾಳ, ಸೃಜನಶೀಲ ಅಭಿವ್ಯಕ್ತಿಗೆ ಸಹಕಾರಿಯಾಗುವಂತಹ ಕಲೆಯಲ್ಲಿ ಚಿತ್ರಕಲೆಯಾಗಿದೆ. ಈ ಜವಾಬ್ದಾರಿಯನ್ನು ಹೊತ್ತು ಸಮಾಜಕ್ಕೆ ಕೊಡುಗೆ ಕೊಟ್ಟ ಅಪ್ರತೀಮ ಚಿತ್ರಕಲಾವಿದರಾದ ಬೀದರ ಜಿಲ್ಲೆಯ

ಹೆಸರಾಂತ ಕಲಾವಿದರಾದ ಶ್ರೀ ಚ.ಭೀ.ಸೋಮಶೆಟ್ಟಿಯವರು. ಜೀವನ ಪರ್ಯಂತ ಹಲವು ಮಾಧ್ಯಮಗಳಲ್ಲಿ ಜಲವರ್ಣ, ತೈಲವರ್ಣ ವಿವಿಧ ಬಣ್ಣಗಳಲ್ಲಿ ಜನಪದ ಕಲಾವಿದರ ಸಾಕ್ಷ್ಯಚಿತ್ರಗಳು ಸಮಾಜ ಸುಧಾರಕರ ಭಾವಚಿತ್ರಗಳು, ಹಲವು ರೀತಿಯ ಹಸ್ತಕೌಶಲ್ಯದೊಂದಿಗೆ ಸೌಂದರ್ಯ ಪ್ರಜ್ಞೆಯನ್ನು ಕಲೆ ಮುಖಾಂತರ ಚಿತ್ರಗಳು ರಚಿಸಿದ್ದಾರೆ.

ಬಸವಾದಿ ಶರಣರ ಬದುಕು, ಸಾಧನೆ ಕಲಾಕೃತಿಯಲ್ಲಿ ೧೨೫ ಚಿತ್ರಗಳನ್ನು ರಚಿಸಿ ನೋಡುಗರಿಗೆ ಮನರಂಜಿಸುವಂತಹ ಕಲೆಗಳಾಗಿವೆ. ಈ ಚಿತ್ರಗಳನ್ನು ಮಠಾಧೀಶರು, ರಾಜಕಾರಣಿಗಳು, ಕಲಾವಿದರು ನೋಡಿ ಮೆಚ್ಚಿರುತ್ತಾರೆ. ಇವರು ದೇವಮಾನವರಾಗಿ ನಿವೃತ್ತ ಬದುಕು ಮಾಡುತ್ತಿದ್ದಾರೆ. ನಾನು ಇವರನ್ನು ಕಲೆಯ ಗುರುಗಳಾಗಿ ಸ್ವೀಕರಿಸುವೆ. ಕುಟುಂಬದೊಂದಿಗೆ, ಸಮಾಜದೊಂದಿಗೆ ಸರಳತೆಯ ಸಾಧಕರು. ತಾಳ್ಮೆ ಏಕಾಗ್ರತೆ ಚಿಂತನಾಶೀಲ ಪ್ರವೃತ್ತಿ, ಭಾವನಾತ್ಮಕ ಪ್ರಪಂಚದ ಮಧುರ ಅನುಭವವನ್ನು ಕಲೆಯ ಮುಖಾಂತರ ತೋರಿಸಿಕೊಟ್ಟಿದ್ದಾರೆ. ಇವರು ಬದುಕಿದಂತೆ ಬದುಕೋಣ, ಬಾಳೋಣ, ಕೃತಾರ್ಥರಾಗೋಣ ಎನ್ನುವುದೇ ನನ್ನ ಬಯಕೆ.

ಶ್ರೀ. ಶ್ರೀಕಾಂತ ಬಿ. ಬಿರಾದಾರ, ಹಿರಿಯ ಚಿತ್ರಕಲಾ ಶಿಕ್ಷಕರು
ಸರಕಾರಿ ಪ್ರೌಢಶಾಲೆ, ಗೂನಳ್ಳಿ

ಕಲಾವಿದರ ಮೇಲೆ ಪ್ರಭಾವ ಬೀರಿದ ಸಂಗತಿಗಳು :

ಸುಮಾರು ೮೦ರ ದಶಕಗಳಲ್ಲಿ ಬೀದರನ ಮಿಶನ್ ಆಸ್ಪತ್ರೆಗೆ ವಿದೇಶಿ ನೇತ್ರ ವೈದ್ಯರೊಬ್ಬರು ಅವರ ಪತ್ನಿಯೊಂದಿಗೆ ಆಗಮಿಸಿದ್ದರು. ಕಲಾಭಿರುಚಿಯುಳ್ಳ ಅವರು ಕಲಾವಿದ ಶ್ರೀಯುತ ಸೋಮಶೆಟ್ಟಿಯವರಿಗೆ ಕರೆಸಿದ್ದರು. ಅವರನ್ನು ಭೇಟಿಯಾಗಲು ಹೋದ ಇವರಿಗೆ ವೈದ್ಯರು ಅತ್ಯಂತ ಆದರದಿಂದ ಬರಮಾಡಿಕೊಂಡರು. ಇವರ ಕಲಾಕೃತಿಗಳನ್ನು ನೋಡಿ ಅಭಿನಂದಿಸಿದರು. ಹರ್ಷ ವ್ಯಕ್ತಪಡಿಸಿ ತಕ್ಷಣವೇ ನೀವು ನಮ್ಮೊಂದಿಗೆ ನಮ್ಮ ದೇಶಕ್ಕೆ ಬನ್ನಿ, ಅಲ್ಲಿ ನಿಮಗಿರಲು ಮನೆ, ಕೈತುಂಬ ಸಂಬಳ ಕೊಡುತ್ತೇವೆ. "ನೀವು ಅಲ್ಲಿದ್ದು ಮಹಾತ್ಮ ಯೇಸು ಕ್ರಿಸ್ತರ ಕುರಿತಾದ ಪೆಂಟಿಂಗ್‌ಗಳನ್ನು ಮಾಡಿಕೊಡುವ ಕೆಲಸ ನೆರವೇರಿಸಿರಿ" ಎಂದು ಪ್ರಸ್ತಾವನೆ ಇತ್ತರು. ಹಣದ ಅವಶ್ಯಕತೆ ಇದ್ದಾಗಲೂ ಇಂತಹದೊಂದು ಪ್ರಸ್ತಾವನೆ ಅತಿ ವಿನಮ್ರತೆಯಿಂದ ಕಲಾವಿದರು ತಿರಸ್ಕರಿಸಿದರು. ಈ ಸಂಗತಿಯು ಅವರೊಳಗಡಗಿರುವ ಸಾಮರ್ಥ್ಯ ಅನಾವರಣಗೊಳಿಸಿತು. ಆ ವೈದ್ಯರಿಗೆ ಯೇಸು ಕ್ರಿಸ್ತರ ಮೇಲಿರುವ ಅಪಾರವಾದ ಭಕ್ತಿ ಕಲಾವಿದ ಸೋಮಶೆಟ್ಟಿಯವರ ಮೇಲೆ ಅತ್ಯಂತ ಪರಿಣಾಮ ಬೀರಿತು. ಅಂತಹದೇ ರೀತಿಯ ಕೆಲಸ ತಾವು ನಂಬಿದ ತತ್ವ ಮಾರ್ಗದ ಹರಿಕಾರರಾದ ವಿಶ್ವಗುರು ಬಸವಣ್ಣನವರ ಮತ್ತು ಅವರ ಸಾಮಾಜಿಕ, ಧಾರ್ಮಿಕ ಚಳುವಳಿಯ ಘಟನಾವಳಿಗಳನ್ನು ಚಿತ್ರ ಕಲೆಯಲ್ಲಿ ಅರಳಿಸುವ ವಿಚಾರ ಅವರಲ್ಲಿ ಅಂಕುರಿಸಿತು ಎಂಬ ಸಂಗತಿ ಕಲಾವಿದರು ಹಂಚಿಕೊಳ್ಳುತ್ತಾರೆ.

ಒಂದೊಮ್ಮೆ ಅವರ ಕಲಾ ಸಾಮರ್ಥ್ಯ ಕುರಿತಾಗಿ ಹೆಮ್ಮೆ ಪಡುವ ಸಂಗತಿಯೊಂದು ನಡೆಯಿತು. ಕಲಬುರಗಿ ವಿಭಾಗದ ಹಿರಿಯ ಶಿಕ್ಷಣಾಧಿಕಾರಿಗಳೊಬ್ಬರು ಮುನ್ಸೂಚನೆ ಇಲ್ಲದೇ ಇವರು ಕಾರ್ಯನಿರ್ವಹಿಸುತ್ತಿದ್ದ ಶಾಲೆಗೆ ಭೇಟಿ ನೀಡಿದ್ದರು. ಆಗ ಇವರನ್ನು ಇವರ ರಚಿಸಿದ ಕಲಾಕೃತಿಗಳನ್ನು ತೋರಿಸುವಂತೆ ಸೂಚಿಸಿದರು. ಆಗ

ಕಲಾವಿದರು ಅವರ ಒಂದೆರಡು ಕಲಾಕೃತಿಗಳನ್ನು ತೋರಿಸಿದಾಗ ಅಧಿಕಾರಿಯವರು ಅತ್ಯಂತ ಹರ್ಷ ವ್ಯಕ್ತಪಡಿಸಿದರಂತೆ. ಹೀಗೆ ಸಾಮಾನ್ಯ ಶಿಕ್ಷಕನೊಬ್ಬನಿಗೆ ವಿಭಾಗ ಮಟ್ಟದ ಅಧಿಕಾರಿ, ಅಂದಿನ ದಿನಮಾನಗಳಲ್ಲಿ ಇವರ ಕಲಾಕೃತಿಗಳ ಸೆಳೆತಕ್ಕೊಳಗಾಗಿ, ಅವರಲ್ಲಿಗೆ ತೆರಳಿ ಭೇಟಿ ಮಾಡಿದಘಟನೆ, ಇವರ ಕಲಾಕೃತಿಗಳಲ್ಲಡಗಿದ ಚುಂಬಕ ಶಕ್ತಿ ಅಭಿವ್ಯಕ್ತಗೊಳ್ಳುತ್ತದೆ.

ಬೀದರ ನಗರಕ್ಕೆ ಪರಮ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿರವರು ಒಂದು ತಿಂಗಳು ಕಾಲ ವಿಶ್ವಗುರು ಬಸವಣ್ಣನವರ ಪ್ರವಚನ ನಡೆಸಿದ್ದರು. ಅವರ ಪ್ರವಚನ ಆಲಿಸಿದ ಇವರಿಗೆ ಬಸವ ತತ್ವ ಬಗ್ಗೆ ಹೆಚ್ಚಿನ ಅರಿವು, ಆಸಕ್ತಿ ಮತ್ತು ಭಕ್ತಿ ದಟ್ಟವಾಯಿತು. ಬಸವಣ್ಣ ಮತ್ತು ಶಿವಶರಣರ ಚಿತ್ರಗಳನ್ನು ಬಿಡಿಸಲಿಕ್ಕೆ ಪ್ರೇರಣೆ ಇಮ್ಮಡಿಯಾಯಿತು. ಇದು ಇವರ ಜೀವನದ ಇನ್ನೊಂದು ಪ್ರಮುಖ ಸಂಗತಿಯಾಗಿದೆಯಂತೆ.

ಕಲಾವಿದರ ವ್ಯಕ್ತಿ ಮೌಲ್ಯಗಳು :

ಕಲಾವಿದರು ಕಲೆಯಲ್ಲಿ ಸಿರಿವಂತರಾದರೂ ಅವರ ಆರ್ಥಿಕ ಪರಿಸ್ಥಿತಿ ಅಷ್ಟೇನು ಸುಸ್ಥರದಲ್ಲಿರಲಿಲ್ಲ. ಆದರೂ ಅವರ ಕಲೆ ಮತ್ತು ಕಲಾಕೃತಿಗಳನ್ನು ಜೀವನೋಪಾಯಕ್ಕಾಗಿ ಮಾರಿಕೊಂಡವರಲ್ಲ. ಬದಲಾಗಿ ಕಲಾ ಶ್ರಮದಿಂದ ಸಮಾಜ ಸೇವೆ ಗೈದಿದ್ದಾರೆ. ಪ್ರಿಂಟ್ ಸಾಧನೆಗಳು ದುಬಾರಿ ಹಾಗೂ ವಿರಳವಾದ ಕಾಲದಲ್ಲಿ ಅನೇಕ ಶರಣರ ಮತ್ತು ವಿವಿಧ ಧರ್ಮದ ದಾರ್ಶನಿಕರ ಭಾವಚಿತ್ರಗಳನ್ನು ಬಿಡಿಸಿಕೊಡುವಂತೆ ಕೇಳಿಕೊಂಡ ಸಂಘ ಸಂಸ್ಥೆಯ –ಗುಡಿ ಕಮೀಟಿಗಳ ಸದಸ್ಯರಿಗೆ ಭಾವಚಿತ್ರ ಬಿಡಿಸಿಕೊಟ್ಟಿದ್ದಾರೆ. ಕೆಲವೊಮ್ಮೆ ದುಬಾರಿಯಾಗಿ ಬೆಲೆ ಬಾಳಬಹುದಾದ ಕಲಾಕೃತಿಗಳಿಗೆ ಕೇವಲ ೧೦೦/–ರೂ.ದೇಣಿಗೆ ಪಡೆದದ್ದು ಇದೆ. ಜಾತಿ–ಧರ್ಮಗಳನ್ನು ಮೀರಿ ಮಹಾಪುರುಷರ ಭಾವಚಿತ್ರ ಬಿಡಿಸಿ ದೇಣಿಗೆಯಾಗಿ ನೀಡಿದ್ದಾರೆ. ಬೀದರಿನ ಬಸವ ಮಂಟಪದಲ್ಲಿ ೬೫ಕ್ಕೂ ಹೆಚ್ಚು ಶರಣರ

ಭಾವಚಿತ್ರಗಳು, ಅನೇಕ ಗುಡಿಗಳಲ್ಲಿಯ ದೇವರುಗಳ ಭಾವಚಿತ್ರ ಹೀಗೆ ಅನೇಕ ಕಲಾಕೃತಿಗಳು ಇವರ ಕಾರ್ಯಕ್ಕೆ ಸಾಕ್ಷಿಯಾಗಿ ನಿಂತಿವೆ. ಮೌನೇಶ್ವರ ಮಂದಿರದಲ್ಲಿ ಮೌನೇಶ್ವರ ಭಾವಚಿತ್ರ, ಬೀದರ ಏರ್‌ಫೋರ್ಸ್, ಗುರುದ್ವಾರದ ಭಾವಚಿತ್ರ, ಅಕ್ಕಮಹಾದೇವಿ ಕಾಲೇಜಿನಲ್ಲಿಯ ಅಕ್ಕಮಹಾದೇವಿ ಭಾವಚಿತ್ರ, ಬಸವ ಮಂಟಪದಲ್ಲಿಯ ಫ.ಗು. ಹಳಕಟ್ಟಿಯವರ ಭಾವಚಿತ್ರ, ಬಸವಕಲ್ಯಾಣದ ಅನುಭವ ಮಂಟಪದಲ್ಲಿಯ ಬಸವಣ್ಣನವರ ಹಾಗೂ ಅನೇಕ ಶರಣರ ಪ್ರಮುಖ ಭಾವಚಿತ್ರಗಳುಇವರ ಕಲಾ ಕೃಷಿ ಕಾಯಕದ ಫಲಗಳಾಗಿವೆ.

"A true Artist is not one who inspired, But one inspires other" ಎಂಬ ಸಾಲ್ವಿಡಾರ್ ಡಾಲಿಯವರ ಮಾತಿನಂತೆ ಇವರು ಅನೇಕ ಚಿತ್ರಕಲಾ ವಿದ್ಯಾರ್ಥಿಗಳಿಗೆ ಸ್ಫೂರ್ತಿ ಮೂರ್ತಿಯಾಗಿದ್ದಾರೆ. ಚಿತ್ರಕಲೆ ಕಲಿಕೆಗಾಗಿ ಇವರಲ್ಲಿ ಬರುವ ವಿಧ್ಯಾರ್ಥಿಗಳಿಗೆ ತಮ್ಮ ಮನೆಯಲ್ಲಿಯೇ ಅವರ ಚಿತ್ರಕಲಾ ಕಾಯಕದೊಂದಿಗೆ ಪಾಠ ಹೇಳಿಕೊಡುವ ಸ್ವಭಾವ ಇವರದು. ವಿಧ್ಯಾರ್ಥಿಗಳಿಂದ ಯಾವುದೇ ಹಣ ಪಡೆಯದೇ ತಮ್ಮ ಕಲೆಯನ್ನು ಧಾರೆ ಎರೆದು ಕೊಟ್ಟಿದ್ದಾರೆ. ಅವರು ಕಲಾರ್ಥಿಗಳಿಗೆ ಪ್ರೇರೆಪಣೆ ನೀಡಿದ್ದಾರೆ. ವಿಧ್ಯಾರ್ಥಿಗಳಿಗೆ ತಿದ್ದಿ-ತೀಡಿ ನೈಪುಣ್ಯತೆ ಪಡೆಯುವಂತೆ ಪ್ರೇರಿಪಿಸಿದ್ದಾರೆ.

ಇವರ ಒಬ್ಬ ವಿಧ್ಯಾರ್ಥಿ ಶ್ರೀ ನಾರಾಯಣ ಕುಂಬಾರ ಎಂಬ ಚಿತ್ರ ಕಲಾಕಾರ ರಾಷ್ಟ್ರಮಟ್ಟದ ಉದಯೋನ್ಮೂಖ ಕಲಾವಿದನಾಗಿ ಹೊರ ಹೊಮ್ಮಿದ್ದಾನೆ. ಅನೇಕರು ಇವರಲ್ಲಿ ಕಲಿತು ಕಲಾ ಶಿಕ್ಷಕರಾಗಿ ಕಲೆಯಲ್ಲಿ ಬದುಕು ಕಟ್ಟಿಕೊಂಡಿದ್ದಾರೆ. ಒಟ್ಟಾರೆ ಬದುಕಿನಲ್ಲಿ ಸಂಸಾರದಲ್ಲಿ ಬರುವ ಆರ್ಥಿಕ ಅಡೆ-ತಡೆಗಳ ನಿವಾರಣೆಗೆ ಇವರಿಂದ ಕಲೆಯನ್ನಾಗಿಲಿ ಅಥವಾ ಕಲಾಕೃತಿಗಳನ್ನಾಗಲಿ ಮಾರಿಕೊಳ್ಳಲಾಗಲಿಲ್ಲ. ಬದಲಾಗಿ ಅವರಿಗಾದಷ್ಟೂ ಕಲಾ ಸೇವೆಯ ದಾಸೋಹ ಗೈಯಿದಿದ್ದಾರೆ. ಸರಳವಾದ ಜೀವನ ಅನುಸರಿಸಿ ಸದಾ ಕಾಯಕದಲ್ಲಿ ತೊಡಗಿಸಿಕೊಂಡಿರುತ್ತಾರೆ.

ಸಮಾರೋಪ

ಮೃದು ಹಾಗೂ ಮಿತ ಭಾಷಿಕರಾದ ಶ್ರೀಯುತರು ಸದಾ ಪ್ರಸನ್ನವಧನರು. ಸರಳ ಸ್ವಭಾವವುಳ್ಳ ಇವರಿಗೆ ಚಿತ್ರ ಕಲೆಯೇ ಪ್ರಾಣ ಜೀವಾಳ ಎಂಬಂತೆ ಜೊತೆಗೆ ಬಸವಾದಿ ಶರಣರ ಮಾರ್ಗದ ಅನುಯಾಯಿಗಳು.

ಎಳೆ ವಯಸ್ಸಿನಲ್ಲಿಯೇ ಸರಳ ರೇಖೆಗಳ ಚಿತ್ರಗಳನ್ನು ಬಿಡಿಸುವ ಹವ್ಯಾಸ ಮಾಡಿಕೊಂಡು ಬರು-ಬರುತ್ತಾ ಚಿತ್ರಗಳಿಗೆ ಬಣ್ಣ ತುಂಬುವ ಕೌಶಲ್ಯವನ್ನು ಮೈಗೂಡಿಸಿಕೊಳ್ಳತೊಡಗಿದರು. ಕಲೆಗಳಲ್ಲಿ ವಿವಿಧ ಪ್ರಕಾರದ ರೇಖಾಚಿತ್ರ (ಪೆನ್, ಕುರಕಲ್ ಪೆನ್, ಪೆನ್ಸಿಲ್ ಬಳಸಿ) ಪಿ.ಓ.ಪಿ ಮತ್ತು ಸಿಮೆಂಟ್ ಬಳಸಿ ಮಾಡುವ ಶಿಲ್ಪಕಲೆ, ಪ್ಯಾಚ್ ವರ್ಕ ಪೇಟಿಂಗ್, ಚಾರ್ಕೊಲ್‌ಪೇಟಿಂಗ್, ತೈಲ ವರ್ಣ, ಜಲವರ್ಣ ಬಳಸಿ ಪೇಟಿಂಗ್ ಹೀಗೆ ಹಲವು ಕಲಾ ಪ್ರಕಾರಗಳು ಕಲಿತರಾದರೂ ರಿಯಲಿಸ್ಟಿಕ್ ಪೆಂಟಿಂಗ್‌ನ್ನು ಪ್ರಮುಖ ಕಲಾ ವಲಯವನ್ನಾಗಿಸಿಕೊಂಡಿದ್ದಾರೆ.

ಫೈನ್ ಆರ್ಟನಲ್ಲಿ ಡಿಪ್ಲೋಮಾವನ್ನು ರಾಜ್ಯ ಮಟ್ಟದಲ್ಲಿ ದ್ವಿತಿಯ ರ್‍ಯಾಂಕ್ ಪಡೆಯುವ ಮುಖಾಂತರ ತೇರ್ಗಡೆಯಾದದ್ದು ಇವರ ಕಲಾ ಪ್ರತಿಭೆಯ ದರ್ಪಣವಾಗಿದೆ. ಕಿರಿಯ ವಯಸ್ಸಿನಲ್ಲಿಯೆ ಚಿತ್ರಕಲಾ ಶಿಕ್ಷಕರಾಗಿ ವೃತ್ತಿ ಆರಂಭಿಸಿದ ಇವರು ಅನೇಕ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಚಿತ್ರಕಲಾ ಸೇವೆ ಸಲ್ಲಿಸುತ್ತಾ ಬಂದಿರುತ್ತಾರೆ. ಜಿಲ್ಲೆಯ ಸಾಹಿತಿಗಳ ಒಡನಾಟದಲ್ಲಿದ್ದ ಇವರು ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕಾರ್ಯಗಳಲ್ಲಿ ಸಕ್ರೀಯವಾಗಿ ಪಾಲ್ಗೋಳ್ಳುತ್ತಾ ಬಂದು ಕಲಾ ಸೇವೆಯ ಮುಖಾಂತರ ಕನ್ನಡ ನಾಡು ನುಡಿ ಕಟ್ಟುವಲ್ಲಿ ಎಲೆ ಮರೆಯ ಕಾಯಿಯಂತೆ ಶ್ರಮಿಸಿದ್ದಾರೆ.

ತಾವು ಮಾಡಿಕೊಂಡ ಕಲೆಯ ಸಾಕ್ಷಾತ್ಕಾರ ತಮ್ಮಷ್ಟಕ್ಕೆ ಸೀಮಿತ ಮಾಡಿಕೊಳ್ಳಲಿಲ್ಲ. ಒಂದು ಅರಳಿದ ಹೂ ಹೇಗೆ ತನ್ನ ಸಾರ್ಥಕತೆ ಸ್ತ್ರೀಯರ ಮುಡಿಗೊ ಅಥವಾ ದೇವರ ಅಡಿಗೊ ಸಲ್ಲಿಕೊಂಡು ತನ್ನ ಬದುಕು ಸಾರ್ಥಕವೆನಿಸಿಕೊಳ್ಳುತ್ತದೆಯೊ ಹಾಗೆ ಇವರಲ್ಲಿಯ ಕಲಾ ಪರಿಣಿತಿ

ಕೌಶಲ್ಯವನ್ನು ಇತರರಿಗೂ ಧಾರೆ ಎರೆದು ಕೊಡುವ ಉದಾರ ಹೃದಯಿಗಳು. ಇವರು ಶಿಕ್ಷಕರಾಗಿ ಅನೇಕ ಕಲಾ ವಿಧ್ಯಾರ್ಥಿಗಳಿಗೆ ಆದರ್ಶ ಗುರುಗಳಾಗಿ, ಆಸಕ್ತರಿಗೆ ಇವರಲ್ಲಿಯ ಕಲೆಯನ್ನು ಧಾರಾಳವಾಗಿ ಪ್ರತಿಫಲ ನಿರೀಕ್ಷಿಸದೆ ಧಾರೆ ಎರೆದಿದ್ದಾರೆ. ಇದರ ಫಲವಾಗಿ ಅನೇಕರು ಯುಶಸ್ವಿ ಚಿತ್ರಕಲಾಕಾರರಾಗಿ ಜಿಲ್ಲೆಯಲ್ಲಲ್ಲದೆ ರಾಜ್ಯ ಮಟ್ಟದಲ್ಲಿ ಗುರುತಿಸುವಷ್ಟು ಬೆಳೆಯುತ್ತಿದ್ದಾರೆ.

ಜಿಲ್ಲೆಯ ಅನೇಕ ಮಠ ಮಂದಿರಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ಸೋಮಶೆಟ್ಟಿಯವರು ರಚಿಸಿರುವ ಕಲಾಕೃತಿಗಳು ಇವರ ಹೆಸರು ಹೇಳುತ್ತಿವೆ. ಚಿತ್ರಕಲಾ ಆಸಕ್ತರಿಗೆ ಸ್ಪೂರ್ತಿ ನೀಡಬಲ್ಲ ಸಂಸ್ಥೆಯಾದ ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಇವರ ಜೀವಮಾನದ ಸಾಧನೆಯ ಯೋಜನೆಯಾಗಿರುವ ಬಸವಣ್ಣನವರ ಜೀವನದ ಮಹತ್ತರ ಸಂಗತಿಗಳು ಹೇಳುವ ಘಟನೆಗಳನ್ನು ಚಿತ್ರರೂಪದಲ್ಲಿ ಬಿಡಿಸಿ ಬಣ್ಣ ತುಂಬುತ್ತಿದ್ದಾರೆ. ೧೦೮ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಸಿದ್ಧಗೊಂಡ ಭಾವಚಿತ್ರಗಳು ಒಂದು ಆರ್ಟ ಗ್ಯಾಲರಿಯ ಸೂರಿನಲ್ಲಿ ಪ್ರದರ್ಶನಗೊಳ್ಳುವ ನಿರೀಕ್ಷೆಯಲ್ಲಿವೆ. ಈ ಯೋಜನೆ ನಾಡಿನ ಅನೇಕ ಮಠಾಧೀಶರು ಬಸವಾಭಿಮಾನಿಗಳು ಮತ್ತು ಸಮಾಜ ಚಿಂತಕರು ಇವರನ್ನು ಕೊಂಡಾಡುವಂತೆ ಮಾಡಿದೆ. ೭೦ ರ ಇಳಿ ವಯಸ್ಸಿನಲ್ಲಿಯೂ ೨೦ ರ ನವಯುವಕನಂತೆ ಚಿತ್ರಕಲೆ ಕಾರ್ಯದಲ್ಲಿ ತಮ್ಮನ್ನು ನಿತ್ಯ ತೊಡಗಿಸಿಕೊಂಡು ಶಿಸ್ತು ಭದ್ಧರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ಮನೆಗೆ ಭೇಟಿ ನೀಡುವ ವಿದ್ಯಾರ್ಥಿ-ಕಲಾಭಿಮಾನಿಗಳೊಂದಿಗೆ ನಿರಾಯಾಸವಾಗಿ ಚಿತ್ರಕಲೆ ಕುರಿತು ಚರ್ಚೆ-ಚಿಂತನೆ ಮಾಡುತ್ತಿರುತ್ತಾರೆ.

ಜಿಲ್ಲೆಯಲ್ಲಿ ನಡೆಯುವ ಚಿತ್ರಕಲಾ ಸ್ಪರ್ದೆ, ಚಿತ್ರಸಂತೆ ಮತ್ತು ಇತರೆ ಉತ್ಸವಗಳಲ್ಲಿ ಹಾಗೂ ಶಾಲಾ ಕಾಲೇಜುಗಳಲ್ಲಿ ಏರ್ಪಡಿಸುವ ಸ್ಪರ್ದೆಗಳಲ್ಲಿ ನಿರ್ಣಾಯಕರಾಗಿ ಭಾಗವಹಿಸುತ್ತಾರೆ. ಕಲೆಯ ಪಕ್ಷವಾಗಿ ನಿರ್ಣಯ ನೀಡುವ ಇವರ ಸ್ವಭಾವ ಎಲ್ಲರಿಗೂ ಅಚ್ಚು ಮೆಚ್ಚು.

ಇಂತಹ ಒಬ್ಬ ಅಪರೂಪದ ಕಲಾವಿದ ಶ್ರೀ ಚ.ಭೀ. ಸೋಮಶೆಟ್ಟಿಯವರು ಜಿಲ್ಲೆಯಲ್ಲಿ ಸಾಂಸ್ಕೃತಿಕ ವಾತಾವರಣ ಸೃಷ್ಟಿಸುವಲ್ಲಿ ಅವಿರತವಾಗಿ ಶ್ರಮಿಸುತ್ತಿದ್ದಾರೆ. ಸುಮಾರು ಅರ್ಧ ಶತಕಗಳಿಗಿಂತಲೂ ಹೆಚ್ಚು ಕಾಲ ಕಲಾ ಸೇವೆ ಸಲ್ಲಿಸಿರುವ ಕಲಾ ಭಕ್ತರಾಗಿ ಕಲಾ ಸಾಕ್ಷಾತ್ಕಾರವನ್ನು ಮಾಡಿಕೊಂಡಿರುವ ಸಂತರೆನಿಸಿದ್ದಾರೆ. ಇವರ ಬದುಕು ಮತ್ತು ಕಲೆ ಓದುಗರಿಗೆ ಸ್ಫೂರ್ತಿಯಾಗಲೆಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಬೀದರ ವತಿಯಿಂದ ಹೊತ್ತಿಗೆ ರೂಪದಲ್ಲಿ ಕನ್ನಡ ಕಟ್ಟಿರುವವರು ಎಂಬ ಪುಸ್ತಕ ಮಾಲಿಕೆಯಡಿ ಪ್ರಸ್ತುತಪಡಿಸಲಾಗುತ್ತಿದೆ. ಶರಧಿಯಷ್ಟು ಸಾಧನೆ ಮಾಡಿರುವ ಕಲಾವಿಧರ ಬದುಕು ಸಿಂಪಿ ಅಳತೆಯಲ್ಲಿ ವಿವರಿಸುವ ಪುಟ್ಟ ಪ್ರಯತ್ನ ಮಾಡಲಾಗಿದೆ. ಇಂಥಹದೊಂದು ಅವಕಾಶ ನನಗೆ ಪುಣ್ಯದಂತೊದಗಿ ಬಂದಿದೆ. ಇದಕ್ಕೆ ಕಾರಣರಾದ ಹಾಗೂ ಸಹಕರಿಸಿದ ಸರ್ವರಿಗೂ ಮತ್ತು ಓದುಗರಿಗು ಶರಣು-ಶರಣಾರ್ಥಿಗಳು.

ಕಲಾವಿದ ಚ.ಭೀ. ಸೋಮಶೆಟ್ಟಿ

– ಎಮ್.ಜಿ. ಗಂಗನಪಳ್ಳಿ

ಚ.ಭೀ. ಸೋಮಶೆಟ್ಟಿ ಚಿತ್ರಕಲೆಗೆ ಹಿರಿಯ ಪಟ್ಟಿ.
ಈ ವಿಭಾಗಕ್ಕೆ ಹೆಸರು : ಕುಂಚದ ಕಲೆಗೆ ಉಸಿರು
ಚಿತ್ರ ಬರಹಕೆ ಬದುಕಾಯ್ತು ಬೋದನೆ,ಸಾಧನೆ
ಕಲಾವಿದನಿಗೆ ಜಗದ ಪ್ರಾಂಗಣ ಕೈ ಚಿತ್ರ:

ಅನುಭಾವದ ಬೊಗಸೆಗೆ ಕಲೆಯ ಬುಗ್ಗೆ ಒಡೆಯಿತು
ಚಿತ್ರ ಬರೆದಂತೆ ಕೈಪಳಗಿತು: ಮನ ಬೆಳಗಿತು
ಶರಣರ ಜೀವನಕೆ ಚಿತ್ರ ಮುದ್ರೆ ಒತ್ತಿದಿರಿ
ಮನಸಿನ ಒಳಹದಕೆ ಇಳಿದಷ್ಟು ಕಲೆಯ ಆಳ:

ಇಳೆ ಮಳೆ ಬೆಳೆ ಗಾಳಿ ದೇವ ದಾಸೋಹದ ಸಿರಿ
ಸತ್ಯಕ್ಕೆ ತಾ ಬಿಚ್ಚಿ ಮಾತನಾಡಿಸಿದ ಪರಿ
ಚಿತ್ರ ಬರೆದಂತೆ ಜಗದಗಲಮೀರಿತು ಮನಸು
ಭಾವ ಬಳ್ಳಿಗೆ ಸಾವಿರದ ಕನಸು : ಹೊಂಗನಸು

ಕಲೆ ಪಲ್ಲವಿಸಿದೊಲು ಹೂ ಕಾಯಿಚಿಗುರು–ಹೊಗರು
ಕಲಾವಿದನ ಕೃತಿಗೆ ಒಳದನಿ ಪ್ರಕೃತಿ ಉಸಿರು.

ವೃತ್ತಿ :

* ಕರ್ನಾಟಕ ಪ್ರೌಢಶಾಲೆ, ಬೀದರನಲ್ಲಿ ಚಿತ್ರಕಲಾ ಶಿಕ್ಷಕರಾಗಿ ೧೯೭೪ ರಿಂದ ೨೦೦೬ರ ವರೆಗೆ ಸುಧೀರ್ಘವಾಗಿ ೩೨ ವರ್ಷಗಳ ಕಾಲ ಸೇವೆ ಸಲ್ಲಿಸಿರುತ್ತಾರೆ.

ಏಕ ವ್ಯಕ್ತಿ ಕಲಾಕೃತಿ ಪ್ರದರ್ಶನ :

* ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೀದರ.

ಇತರೆ ಪ್ರದರ್ಶನಗಳು :

* ತೋಟಗಾರಿಕೆ ಇಲಾಖೆ, ಬೀದರ.
* ಬಿ.ವ್ಹಿ.ಬಿ. ಕಾಲೇಜು, ಬೀದರ.
* ಬಸವ ಮಂಟಪ ಬೀದರ.
* ೧೯೭೨ ಕೈಗಾರಿಕೆ ಇಲಾಖೆ, ಬೀದರ.
* ೧೯೭೭ ಕಲಾ ಶಿಕ್ಷಕರ ಸಮೂಹ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೀದರ ವತಿಯಿಂದ ಚಿತ್ರಕಲಾ ಪ್ರದರ್ಶನ.
* ೧೯೮೫ ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ ವಿಭಾಗ, ಗುಲಬರ್ಗಾ.

* ೨೦೦೯ ಸಾಮೂಹಿಕ ಚಿತ್ರಕಲಾ ಪ್ರದರ್ಶನ, ಶ್ರೀ ಅರವಿಂದೋ ಆಶ್ರಮ ಪಾಂಡಿಚೇರಿ.
* ೨೦೧೩ ಕಲಾ ಮಂದಿರ ಸಚಿತ್ರ ಗ್ಯಾಲರಿ, ಮೈಸೂರು.
* ೨೦೧೩ ಭರ್ಣಿ ಆರ್ಟ ಗ್ಯಾಲರಿ, ಮೈಸೂರು.
* ೨೦೧೩ ಸಬರಂಗ್ ಆರ್ಟ ಗ್ಯಾಲರಿ, ಮೈಸೂರು.
* ೨೦೧೪ ದರ್ಬಾರ ಹಾಲ್ ಆರ್ಟ ಗ್ಯಾಲರಿ, ಕೊಚ್ಚಿ, ಕೇರಳ.

ಕಲಾ ಶಿಬಿರಗಳು :

* ೧೯೮೬ ಲ್ಯಾಂಡ್ ಸ್ಕೇಪ್ ಬೀದರ.
* ೨೦೦೭ ಚೈತನ್ಯಮಯಿ ಆರ್ಟ ಗ್ಯಾಲರಿ, ಗುಲಬರ್ಗಾ.
* ೨೦೦೭ ಲಲಿತಕಲಾ ಅಕಾಡೆಮಿ, ಬೆಂಗಳೂರು ಇವರ ಆಶ್ರಯದಲ್ಲಿ ಪೇಟಿಂಗ್ ಕ್ಯಾಂಪ್, ಉಡುಪಿ.
* ೨೦೧೦ ಬಸವ ಉತ್ಸವ, ಬಸವಕಲ್ಯಾಣ, ಬೀದರ.
* ೨೦೧೨ ಚೈತನ್ಯಮಯಿ ಆರ್ಟ ಗ್ಯಾಲರಿ, ಗುಲಬರ್ಗಾ

ಸನ್ಮಾನ ಮತ್ತು ಪ್ರಶಸ್ತಿಗಳು :

* ೧೯೬೬ ರಲ್ಲಿ ೯ನೇ ವರ್ಗದಲ್ಲಿ ಅಭ್ಯಾಸ ಮಾಡುತ್ತಿರುವಾಗ ತೈಲವರ್ಣದಲ್ಲಿ ಬಿಡಿಸಿದ ಪಂಡಿತ ಜವಾಹರಲಾಲ ನೆಹರು ಭಾವಚಿತ್ರ ಮೆಚ್ಚಿ ಆಗಿನ ಎಸ್.ಪಿ. ಜೋಗಿಂದರಸಿಂಗ್ ರವರಿಂದ ಸನ್ಮಾನ.

* ೧೯೬೮ ರಲ್ಲಿ ಶ್ರೀ ಬಸವೇಶ್ವರ ಅಷ್ಟ ಶತಮಾನೋತ್ಸವದಂದು ಬಸವಕಲ್ಯಾಣದಲ್ಲಿ ಸನ್ಮಾನ.
* ೧೯೭೨ ರಂದು ಡಿಪಾರ್ಟಮೆಂಟ್ ಆಫ್ ಇಂಡಸ್ಟ್ರೀಜ್ ಆ್ಯಂಡ್ ಕಾಮರ್ಸ್ ಅವರಿಂದ ಸನ್ಮಾನ.
* ೧೯೭೬ ರಂದು ಹಿರೇಮಠ ಸಂಸ್ಥಾನ ಭಾಲ್ಕಿಯಲ್ಲಿ ಸನ್ಮಾನ.
* ೧೯೭೬ ರಲ್ಲಿ ಬಸವ ಮಂಟಪ ಬೀದರನಲ್ಲಿ ಶ್ರೀ ಬಿ.ಡಿ. ಜತ್ತಿ ಮಾನ್ಯ ಉಪರಾಷ್ಟ್ರಪತಿಯವರಿಂದ ಸನ್ಮಾನ.
* ೧೯೭೭ ರಲ್ಲಿ ಬಸವೇಶ್ವರರ ಶತಮಾನೋತ್ಸವ ಬಸವ ಸಮಿತಿ ಗುಲಬರ್ಗಾದಲ್ಲಿ ಸನ್ಮಾನ.
* **೧೯೮೪ ರಲ್ಲಿ ಮೈಸೂರು ದಸರಾ ಉತ್ಸವದಲ್ಲಿ ಸಹಪಾಠಿಯವರ ಜೊತೆ ಸೇರಿ ಮಾಡಿದಂತಹ ಟ್ಯಾಟೋ ಕಲಾಕೃತಿಗೆ ಬೀದರ ಜಿಲ್ಲೆಗೆ ರಾಜ್ಯ ಮಟ್ಟದ ಪ್ರಶಸ್ತಿ.**
* ೧೯೮೫ ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ ವಿಭಾಗ ಗುಲಬರ್ಗಾ ಇವರಿಂದ ಸನ್ಮಾನ.
* **೧೯೯೫ ರಲ್ಲಿ ಶಿಕ್ಷಣ ಇಲಾಖೆ ತಾಲೂಕಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ.**
* **೧೯೯೮ ರಲ್ಲಿ ಜಿಲ್ಲಾ ಮಟ್ಟದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ.**
* ೧೯೯೯ ರಲ್ಲಿ ಹಿಂದಿ ಪ್ರಚಾರ ಸಮಿತಿ ಜಹೀರಾಬಾದ ವತಿಯಿಂದ ಸನ್ಮಾನ.
* **೨೦೦೩ ರಲ್ಲಿ ಕನ್ನಡ ಸಾಹಿತ್ಯ ಪರಿಷತ್, ಬೀದರ್ ಇವರಿಂದ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ.**

* ೨೦೦೬ ರಲ್ಲಿ ಸ್ವಾತಂತ್ರೋತ್ಸ ದಿನಾಚರಣೆದಂದು ನೆಹರು ಕ್ರೀಡಾಂಗಣದಲ್ಲಿ ಶ್ರೀ ಬಂಡೆಪ್ಪಾ ಖಾಶೆಂಪೂರ ಸನ್ಮಾನ್ಯ ಕೃಷಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಂದ ಚಿತ್ರಕಲೆಯಲ್ಲಿ ಗಣನೀಯ ಸೇವೆ ಸಲ್ಲಿಸಿದ್ದರಿಂದ ಸನ್ಮಾನ.

* ೨೦೦೬ ರಂದು ಸುವರ್ಣ ಕರ್ನಾಟಕ ಮಹೋತ್ಸವ ನಿಮಿತ್ತ ನೃಪತುಂಗ ಕನ್ನಡ ಬಳಗ, ಬೀದರ ವತಿಯಿಂದ ಸನ್ಮಾನ.

* ೨೦೦೭ನೇ ಸಾಲಿನ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ಇವರು ಕಲೆಯ ಪ್ರತಿಭೆಯಲ್ಲಿ ಗುರುತಿಸಿ ದಿನಾಂಕ ೦೭.೦೬.೨೦೦೭ರಂದು ಗುಲಬರ್ಗಾದಲ್ಲಿ "ವಿಶೇಷ ಆಹ್ವಾನಿತರಾಗಿ" ಪಾಲ್ಗೊಂಡು, ಗೌರವ ಸನ್ಮಾನ ಪಡೆದಿರುವುದು.

* **೨೦೧೪ ರಂದು ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ಇವರು ದಿನಾಂಕ ೨೫.೧೧.೨೦೧೪ ರಂದು ಗೌರವ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಿದರು.**

* ೨೦೧೫ ರಲ್ಲಿ ಶ್ರೀಗುರು ಬಸವೇಶ್ವರ ಸಂಸ್ಥಾನ ಮಠ, ಹುಲಸೂರು ಇವರು ಶರಣ ಸಂಸ್ಕೃತಿ ಉತ್ಸವದಲ್ಲಿ ದಿನಾಂಕ ೦೧.೦೧.೨೦೧೫ ರಂದು ಸನ್ಮಾನ.

* ೨೦೧೫ ರಲ್ಲಿ ಕನ್ನಡಪರ ಸಂಘ ಸಂಸ್ಥೆಗಳ ಬಳಗ, ಬೀದರ ಇವರು ದಿನಾಂಕ ೧೫.೦೨.೨೦೧೫ ರಂದು ಪ್ರಶಸ್ತಿ ಪುರಸ್ಕಾರ.

* ೨೦೧೫ ರಲ್ಲಿ ರಾಣಿ ಕಿತ್ತೂರ ಚೆನ್ನಮ್ಮ ಶಿಕ್ಷಣ ಸಂಸ್ಥೆ, ಬೀದರ ವತಿಯಿಂದ ದಿನಾಂಕ ೨೦.೦೨.೨೦೧೫ ರಂದು ಪುರಸ್ಕಾರ.

* ೨೦೧೫ ರಲ್ಲಿ ಬೀದರ ಪಶುವೈದ್ಯಕೀಯ ವಿಶ್ವವಿದ್ಯಾಲಯ ದಶಮಾನೋತ್ಸವ ನಿಮಿತ್ತ ರಾಜ್ಯ ಮಟ್ಟದ ಚಿತ್ರಕಲಾ ಮೇಳದಲ್ಲಿ ದಿನಾಂಕ ३೦.೧೦.೨೦೧೫ ರಂದು ಗೌರವ ಸನ್ಮಾನ.

* ೨೦೧೫ ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಹಾಗೂ ರಾಜ್ಯ ಶಿಕ್ಷಣ ಸಂಶೋಧನೆ ತರಬೇತಿ ನಿರ್ದೇಶನಾಲಯ, ಬೆಂಗಳೂರು.
* ಕಲಬುರಗಿ ವಿಭಾಗ ಮಟ್ಟದ ಚಿತ್ರಕಲಾ ಶಿಬಿರದಲ್ಲಿ ದಿನಾಂಕ ೨೨.೦೨.೨೦೧೫ ರಂದು ಗೌರವಿಸಿದರು.
* ದಿನಾಂಕ ೨೨.೧೨.೨೦೧೭ ರಂದು ಕಲಾವೃತ ಯ್ಯಾಸ, ಉಜ್ಜನಿ ಈ ಸಂಸ್ಥೆಯಿಂದ "ರಾಷ್ಟ್ರೀಯಸ್ವಸ್ತಿಸನ್ಮಾನ".

ಬಿರುದಾಂಕಿತಗಳು :

* ೨೦೧೨ ರಲ್ಲಿ ಎಂ.ಜಿ. ದೇಶಪಾಂಡೆ ಪ್ರತಿಷ್ಠಾನ, ಬೀದರ ವತಿಯಿಂದ ಚಿತ್ರಕಲೆ ಲೋಕದ ಯಶೋಸಾಧಕರು

"ಶರಣ ಕಲಾಶ್ರೀ" ಪ್ರಶಸ್ತಿ ಪ್ರದಾನ :

* ೨೦೧೩ ರಂದು ಜನಸ್ನೇಹಿ (ರಿ) ಸಮಾಜ ಸ್ಪಂದನ ಪರಿವರ್ತನಾ ಸಂಸ್ಥೆ, ಬೆಂಗಳೂರು ಇವರಿಂದ **"ಕಲಾ ಯೋಗಿ"** ಎಂದು ಸನ್ಮಾನ ಪತ್ರದೊಂದಿಗೆ ಗೌರವಿಸಿದರು.
* ೨೦೧೪ ರಲ್ಲಿ ಬೀದರ ಜಿಲ್ಲಾ ೫ನೇ ಶರಣ ಸಾಹಿತ್ಯ ಸಮ್ಮೇಳನ ಭಾತಂಬ್ರಾ ದಲ್ಲಿ **"ಬಸವ ಕಲಾ ರತ್ನ"**ಪ್ರಶಸ್ತಿಪತ್ರದೊಂದಿಗೆ ಗೌರವಿಸಿದರು.
* ರವಿಕಿರಣ ಪ್ರತಿಷ್ಠಾನ, ಬೆಂಗಳೂರು ಇವರು **"ಚಿತ್ರಕಲಾ ರತ್ನ"** ಎಂದು ಸನ್ಮಾನಪತ್ರದೊಂದಿಗೆ ಗೌರವಿಸಿದರು.
* ೨೦೧೪ ರಂದು ಹಿರೇಮಠ ಸಂಸ್ಥಾನ, ಭಾಲ್ಕಿ ಇವರಿಂದ **"ಕಲಾ ತಪಸ್ವಿ"** ಎಂದು ಸನ್ಮಾನ ಪತ್ರದೊಂದಿಗೆ ಗೌರವಿಸಿದರು.

* ೨೦೧೫ ರಂದು ಕರುನಾಡು ಸಾಹಿತ್ಯ ಮತ್ತು ಸಾಂಸ್ಕೃತಿಕ ಬೀದರ ಇವರು **"ಕರುನಾಡು ಸಿರಿ"** ಎಂದು ಸನ್ಮಾನ ಪತ್ರದೊಂದಿಗೆ ಗೌರವಿಸಿದರು.

* ೨೦೧೫ ರಂದು ಜನಸೇವಾ ಪ್ರತಿಷ್ಠಾನ (ರಿ) ಸಂಚಾಲಿತದ ದಶಮಾನೋತ್ಸವ ಸಮಾರಂಭದಲ್ಲಿ **"ಜನಸಿರಿ"** ಪ್ರಶಸ್ತಿ ನೀಡಿ ಗೌರವಿಸಿದರು.

* ೨೦೧೫ ರಲ್ಲಿ ದೇಶಪಾಂಡೆ ಸಾಹಿತ್ಯಿಕ ಸಾಂಸ್ಕೃತಿಕ ಪ್ರತಿಷ್ಠಾನ(ರಿ) ಬೀದರ ಹಾಗೂ ವಿದ್ಯಾಶ್ರೀ ಶೈಕ್ಷಣಿಕ ಚಾರಿಟೇಬಲ್ ಟ್ರಸ್ಟ್, ಬೀದರ ಇವರು ಕವಿ ಸಮ್ಮೇಳನದಲ್ಲಿ **"ಚಿತ್ರಕಲಾ ಚಂದ್ರಿಕೆ ರತ್ನ"** ಪ್ರಶಸ್ತಿ ನೀಡಿ ಗೌರವಿಸಿದರು.

* ಹಿರೇಮಠ ಸಂಸ್ಥಾನ, ಭಾಲ್ಕಿ ಇವರು **"ನಾಡೋಜಡಾ॥ ಜೆ.ಎಸ್. ಖಂಡೇರಾವ ಪ್ರಶಸ್ತಿ"** ಕೊಟ್ಟು ಗೌರವಿಸಿದರು.

* ೨೦೧೬ ರಲ್ಲಿ ಗಾನಯೋಗಿ ಪಂಚಾಕ್ಷರ ಗವಾಯಿ ಸೇವಾ ಸಂಘ, ಬೀದರ ಇವರು **"ಚಿತ್ರಕಲಾ ಸೇವಾ ರತ್ನ ಪ್ರಶಸ್ತಿ"** ಪತ್ರ ನೀಡಿ ಗೌರವಿಸಿದರು.

* ೨೦೧೮ ರಲ್ಲಿ ಚೈತನ್ಯಮಯಿ ಆರ್ಟ ಗ್ಯಾಲರಿ, ಕಲಬುರಗಿ ಯವರು ೫,೦೦೦/-ರೂ. ನಗದು ಜೊತೆಗೆ **"ಚೈತನ್ಯಶ್ರೀ ಕಲಾಪ್ರಶಸ್ತಿ"** ಯನ್ನು ಕೊಟ್ಟು ಗೌರವಸಿದರು.

ಇವರ ಕಲಾಕೃತಿಗಳ ಸಂಗ್ರಹ :

೧) ಬಸವೇಶ್ವರ ಪೆಂಟಿಂಗ್ ಬಸವ ಮಂಟಪ ಧಾರವಾಡ.

೨) ಬಸವೇಶ್ವರ ಪೆಂಟಿಂಗ್ ಹುಬ್ಬಳ್ಳಿ.

೩) ರಾಘವೇಂದ್ರಸ್ವಾಮಿ ಪೆಂಟಿಂಗ್, ಬಾಲಾಜಿ ದೇವಸ್ಥಾನ, ತಾಂಡೂರ.

೪) ಅಕ್ಕಮಹಾದೇವಿ ಪೆಂಟಿಂಗ್, ಬಸವಮಂಟಪ, ಜಹೀರಬಾದ.

೫) ಬಕ್ಕಪ್ರಭು ಪೆಂಟಿಂಗ್, ಕರಕನಳ್ಳಿ ಮಂಟಪ, ಕರಕನಳ್ಳಿ.

೬) ಮೌನೇಶ್ವರ ಪೆಂಟಿಂಗ್, ಮೌನೇಶ್ವರ ಮಂದಿರ ಬೀದರ

೭) ಶ್ರೀ ಬಸವೇಶ್ವರ ಪೆಂಟಿಂಗ್ ಅನುಭವ ಮಂಟಪ, ಬಸವಕಲ್ಯಾಣ.

೮) ಚೆನ್ನಬಸವಣ್ಣ ಪೆಂಟಿಂಗ್, ಹಿರೇಮಠ, ಭಾಲ್ಕಿ.

೯) ಬಸವೇಶ್ವರ ವಚನದ ಪೆಂಟಿಂಗ್, ಬಸವ ಸಮಿತಿ, ಬೆಂಗಳೂರು.

೧೦) ಮಹಾದೇವಪ್ಪ ರಾಂಪೂರೆ ಪೆಂಟಿಂಗ್ ಬಿ.ವ್ಹಿ.ಬಿ. ಕಾಲೇಜ, ಬೀದರ.

೧೧) ಆರ್.ವ್ಹಿ. ಬೀಡಪ್ಪ ಪೆಂಟಿಂಗ್ ಕರ್ನಾಟಕ ಪ್ರೌಢಶಾಲೆ ಬೀದರ.

೧೨) ಫ.ಗು. ಹಳಕಟ್ಟಿ ಪೆಂಟಿಂಗ್ ಬಸವ ಮಂಟಪ, ಬೀದರ.

೧೩) ಅಕ್ಕಮಹಾದೇವಿ ಪೆಂಟಿಂಗ್ ಅಕ್ಕಮಹಾದೇವಿ ಕಾಲೇಜ, ಬೀದರ.

೧೪) ಪರಮ ಪೂಜ್ಯ ಮ.ಘ.ಚ.ಚೆನ್ನಬಸವ ಪಟ್ಟದೇವರ, ಪೆಂಟಿಂಗ್, ಭಾಲ್ಕಿ.

೧೫) ಬೀದರಿನ ಗುರುದ್ವಾರ ಪೇಂಟಿಂಗ, ಬೀದರ ಏರ್ ಫೋರ್ಸ.

ಶ್ರೀ ಚ.ಭೀ. ಸೋಮಶೆಟ್ಟಿಯವರ ಅಪರೂಪದ ಕಲಾಕೃತಿಗಳು



ಲಮಾಣಿ ರೇಖಾಚಿತ್ರ

ಹಳ್ಳಿಯ ಹೆಣ್ಣುಮಕ್ಕಳು

ಶ್ರೀ ಚ.ಭೀ. ಸೋಮಶೆಟ್ಟಿಯವರ ಅಪರೂಪದ ಕಲಾಕೃತಿಗಳು



ರೇಖಾಚಿತ್ರ

ಬುಡಬುಡಕೆ ಜನಾಂಗದ ಆಚರಣೆ ಕುಣಿತ



ಶ್ರೀ ಚ.ಭೀ. ಸೋಮಶೆಟ್ಟಿಯವರಿಗೆ
ಕರ್ನಾಟಕ ಲಲಿತಕಲಾ ಅಕಾಡೆಮಿ ಗೌರವ ಪುರಸ್ಕಾರ
೨೦೧೪–೧೫



ಶ್ರೀ ಚ.ಭೀ. ಸೋಮಶೆಟ್ಟಿಯವರಿಗೆ ಪ್ರದಾನ ಮಾಡಲಾದ
ಕರ್ನಾಟಕ ಲಲಿತಕಲಾ ಅಕಾಡೆಮಿಯ
ಗೌರವ ಪ್ರಶಸ್ತಿ ಫಲಕ

ಶ್ರೀ ಚ.ಭೀ. ಸೋಮಶೆಟ್ಟಿಯವರ ಅಪರೂಪದ ಕಲಾಕೃತಿಗಳು



ಮಹಾಮಾನವತಾವಾದದ ವಿಶ್ವ ಸಂದೇಶ
ಬಸವಣ್ಣನವರು

ಶ್ರೀ ಚ.ಭೀ. ಸೋಮಶೆಟ್ಟಿಯವರ ಅಪರೂಪದ ಕಲಾಕೃತಿಗಳು



ಕ್ಯಾನವಾಸ ಮೇಲಿನ ಚಿತ್ರಕಲೆ
ಜನಪದ ಗಾಯನ

ಶ್ರೀ ಚ.ಭೀ. ಸೋಮಶೆಟ್ಟಿಯವರ ಅಪರೂಪದ ಕಲಾಕೃತಿಗಳು



ವಿದ್ಯಾರ್ಥಿ ದೆಸೆಯಲ್ಲಿ ೯ನೇ ತರಗತಿಯಲ್ಲಿ
ಓದುವಾಗಿನ ಜಲವರ್ಣ ಚಿತ್ರ

ಶ್ರೀ ಚ.ಭೀ. ಸೋಮಶೆಟ್ಟಿಯವರ ಅಪರೂಪದ ಕಲಾಕೃತಿಗಳು



ತೈಲವರ್ಣದಲ್ಲಿ
ವಿಶ್ವೇಶ್ವರಯ್ಯನವರು



ಪಶು ವೈದ್ಯಕೀಯ ವಿಶ್ವವಿದ್ಯಾಲಯ ದಶಮಾನೋತ್ಸವ
– ೨೦೧೫ ನಿಮಿತ್ತ ಬಿಡಿಸಲಾದ ಪ್ರಾತ್ಯಕ್ಷಿಕೆ

(ಕುರಿ ಕಾಯುವುದು)

ಶ್ರೀ ಚ.ಭೀ. ಸೋಮಶೆಟ್ಟಿಯವರ ಅಪರೂಪದ ಕಲಾಕೃತಿಗಳು



ವಿಶ್ವಗುರು ಬಸವಣ್ಣನವರು

ಪುಸ್ತಕ ದಾಸೋಹಿಗಳು

ಶ್ರೀ ಅರುಣಕುಮಾರ ಹೊತಪೇಟೆ



ಸರಳ ಸಜ್ಜನಿಕೆ, ಸಹಸ್ಪಂದನಾ ಮನೋಭಾವ, ಹೃದಯ ವೈಶಾಲತೆಯುಳ್ಳ ನಗುಮುಖದ ಸ್ನೇಹ ಜೀವಿ ಶ್ರೀ ಅರುಣಕುಮಾರವರದ್ದು ಅಪರೂಪದ ವ್ಯಕ್ತಿತ್ವ. ಎಲ್ಲರೊಂದಿಗೆ ಬೆರೆಯುವ ಇವರು ಆಪ್ತ ವಲಯದಲ್ಲಿ ಅರುಣಣ್ಣಾ ಎಂದೆ ಪ್ರಸಿದ್ದ. ತಮ್ಮ ಸುತ್ತಮುತ್ತಲಿನ ಒಡನಾಟಿಗಳ ಸ್ನೇಹ ಹಾಗೂ ಪ್ರೀತಿ ಪಾತ್ರಕ್ಕೋಳಗಾದವರು. ಇವರ ತಂದೆ ಶ್ರೀ ಶರಣಪ್ಪಾ ಹೊತಪೇಟೆರವರು ನಿವೃತ್ತ ಖಜಾನೆ ಅಧಿಕಾರಿ. ಇವರ ತಾಯಿ ಶ್ರೀಮತಿ ಚಂದ್ರಕಲಾ ಗೃಹಿಣಿ. ಈ ಆದರ್ಶ ದಂಪತಿಗಳ ಹೆಮ್ಮೆಯ ಜೇಷ್ಠ ಪುತ್ರರಾಗಿ ಅರುಣಕುಮಾರ 14ನೇ ಜನೇವರಿ 1979 ರಲ್ಲಿ ಜನಿಸಿದರು, ಕೃಷಿ ವಿಶ್ವವಿದ್ಯಾಲಯ ಧಾರವಾಡದ, ರಾಯಚೂರಿನ ಮಹಾವಿದ್ಯಾಲಯದಲ್ಲಿ ಕೃಷಿ ತಾಂತ್ರಿಕತೆಯಲ್ಲಿ ಪದವಿ ಪಡೆದರು. ಓದಿನ ನಂತರ ಸರಕಾರಿ ನೌಕರಿ ಬಯಸದೆ ಸ್ವ ಉದ್ಯೋಗ ಮಾಡಲು ನಿರ್ಧರಿಸಿ ಖ್ಯಾತ ನೆಟಾಫಿಮ್ ಕಂಪನಿಯ ಹನಿ ನೀರಾವರಿಯ ಅಧಿಕೃತ ಪರವಾನಿಗೆ ಪಡೆದರು. ಕೃಷಿ ಇಲಾಖೆಯ ಹಾಗೂ ಸರಕಾರದ ಸಹಕಾರದೊಂದಿಗೆ ಜಿಲ್ಲೆಯಾದ್ಯಾಂತ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೋಳ್ಳುವಂತೆ ರೈತರಿಗೆ ಪ್ರೇರೆಪಿಸಿ ಕೃಷಿ ಕ್ರಾಂತಿ ಮಾಡುತ್ತಿದ್ದಾರೆ.

ಇವರ ಶ್ರೀಮತಿ ಸಂತೋಷಿಯವರು ಬೀದರ ನಗರಸಭೆಯ ನಿಕಟ ಪೂರ್ವ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. ಇವರ ಅವಧಿಯಲ್ಲಿ ಅನೇಕ ಜನಹಿತ ಕಾರ್ಯ ಮಾಡಿ ಎಲ್ಲ ರೀತಿಯ ಮೂಲಭೂತ ಸೌಕರ್ಯ ಒದಗಿಸದರ ಫಲವಾಗಿ ಬೀದರನ ಅಭಿವೃದ್ಧಿ ಹೊಂದಿದ ನಗರದಲ್ಲಿ ಬಸವನಗರ ಬಡಾವಣೆಯು ಅಗ್ರ ಸ್ಥಾನದಲ್ಲಿದೆ. ಇವರ ಶ್ರೀಮತಿ ಸಾಮಾಜಿಕ ಸೇವೆ ಜೊತೆಗೆ ಮನೆಗೆ ಬರುವ ಅತಿಥಿಗಳ ಸತ್ಕಾರದ ಸೇವೆಯಲ್ಲಿ ಎತ್ತಿದ ಕೈ. ಕುಟುಂಬದ ಜವಬ್ದಾರಿಯನ್ನೂ ಅಚ್ಚುಕಟ್ಟಾಗಿ ನಿರ್ವಹಿಸುವ ಆದರ್ಶ ಗೃಹಿಣಿ. ಇವರ ಎಲ್ಲ ರೀತಿಯ ಪರಿಶ್ರಮಕ್ಕೆ ಶ್ರೀ ಅರುಣಕುಮಾರರವರು ಸಮರ್ಥ ಬೆಂಬಲ ನೀಡುತ್ತಿರುವುದು ಸರ್ವವಿದಿತ ಸಂಗತಿ. ಇವರ ಸಹೋದರ ಕಿರಣ ಹಾಗೂ ಶ್ವೇತಾ, ಮಕ್ಕಳಾದ ಶಾಂಭವಿ, ವಿಘ್ನೇಶ, ತರುಣ, ತೇಜಶ್ವಿನಿ ಹೀಗೆ ಅವಿಭಕ್ತ ಆದರ್ಶ ಕುಟುಂಬದೊಡನೆ ಸಂತೃಪ್ತ ಜೀವನ ನಡೆಸುತ್ತಿದ್ದಾರೆ.

ಹಿರಿಯರ ಬಗೆಗಿನ ಗೌರವ, ಸ್ನೇಹಿತರಿಗೆ ವಿಶ್ವಾಸ, ಕಿರಿಯರಿಗೆ ವಾತ್ಸಲ್ಯ ಹಾಗು ಸಹವರ್ತಿಗಳಿಗೆ ಆತ್ಮೀಯತೆ ತೊರುವ ಸಮಾಜದ ಬಗೆಗಿನ ಕಾಳಜಿ ಅಪಾರ. ಆಪತ್ತಿನಲ್ಲಿರುವವರಿಗೆ ಅವರು ಆಪ್ತರಾಗಿ ತನ್ನ ಕೈಲಾದ ಸಹಾಯ ಹಸ್ತ ಚಾಚುತ್ತಾರೆ. ಸದಾ ದುರ್ಬಲರ ಬೆಂಬಲಕ್ಕೆ ನಿಲ್ಲುತ್ತಾರೆ. ಹೀಗೆ ಸಮಾಜಕ್ಕೆ ತನು-ಮನ-ಧನ ದಿಂದ ಸೇವೆ ಸಲ್ಲಿಸುವ ಶ್ರೀ ಅರುಣಕುಮಾರ ಇವರು, ಬೀದರ ನಗರದಲ್ಲಿ ಅನೇಕ ಅಭಿಮಾನಿ ಬಳಗವನ್ನು ಹೊಂದಿದ್ದಾರೆ. ಇವರು ಈ ಕೃತಿಯ ದಾಸೊಹ ಗೈದಿದ್ದಾರೆ ಇವರಿಗೆ ತುಂಬು ಹೃದಯದ ಧನ್ಯವಾದಗಳು.



ಕನ್ನಡ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ನೆಲೆಗಳನ್ನು ಕಟ್ಟುವ, ಹಾಗೂ ಕನ್ನಡ, ಕನ್ನಡಿಗ, ಕರ್ನಾಟಕದ ಸಮಗ್ರ ಏಳಿಗೆಯ ಮಹದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದೆ. ಅದರ ಆಶಯಕ್ಕೆ ತಕ್ಕಂತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕ್ರಿಯಾಶೀಲವಾಗಿದೆ. ಐತಿಹಾಸಿಕ, ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಬೀದರ ಜಿಲ್ಲೆಯ ಪ್ರಬಲ ಇಚ್ಛಾಶಕ್ತಿ, ಇಚ್ಛಾಸಕ್ತಿಯ ಕೊರತೆಯಿಂದಾಗಿ ಈ ಭಾಗ ಹಿಂದುಳಿದ ಹಣೆಪಟ್ಟಿ ಹೊತ್ತಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಸ್ಥಳೀಯ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂವರ್ಧನೆಗಾಗಿ ಅನೇಕ ಕಾರ್ಯಚಟುವಟಿಕೆಗಳನ್ನು ಆಯೋಜಿಸಿದೆ. ಜಾಗತೀಕರಣದ ಕರಿನೆರಳಿನಿಂದ ಸ್ಥಳೀಯ ಭಾಷೆ ಸಂಸ್ಕೃತಿ ನಲುಗುತ್ತಿರುವಾಗ ಅವನ್ನು ಉಳಿಸುವ ಹೋರಾಟದ ಹಲವು ದಾರಿಗಳು ಕಟ್ಟಿಕೊಳ್ಳಬೇಕಾಗಿದೆ. ಅದರಲ್ಲಿ ಗಡಿಭಾಗದಂಥ ಬೀದರ ನೆಲದಲ್ಲಿ ಇನ್ನೂ ಹೆಚ್ಚು ರಚನಾತ್ಮಕ ಕಾರ್ಯಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿ, ಪರಭಾಷೆಗಳಿಗೆ ಸವಾಲಾಗಿ ನಿಲ್ಲುವ ಅಗತ್ಯತೆ ಇದೆ. ಈ ಹಿನ್ನಲೆಯಲ್ಲಿ ಪರಿಷತ್ತು ಕಾರ್ಯನಿರತವಾಗಿದೆ. ಮಾಹಿತಿ ತಂತ್ರಜ್ಞಾನ ಬೆಳೆದಂತೆ ಆಧುನಿಕತೆ ಹೆಚ್ಚಾಗಿ ಜೀವನ ಪ್ರೀತಿ ಕಡಿಮೆಯಾಗುತ್ತಿದೆ. ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಗ್ಯಾಜೆಟ್ ಲೋಕದಲ್ಲೇ ಮುಳುಗುತ್ತಿರುವ ನಮಗೆ ಅಕ್ಷರ ಲೋಕದ ಪುಸ್ತಕ ಸಂಸ್ಕೃತಿಯ ಉಳಿವು ಅಷ್ಟೇ ಮುಖ್ಯವಾಗಿದೆ. ಆದ್ದರಿಂದ ಸ್ಥಳೀಯ ಲೇಖಕರು, ಕಲಾವಿದರನ್ನು, ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು, ಸ್ಥಳೀಯ ಕಲೆ, ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ದಾಖಲಿಸುವುದು, ಕನ್ನಡಿಗರಲ್ಲಿ ಓದುವ ಅಭಿರುಚಿಯನ್ನು ಮೂಡಿಸುವುದು. ಒಟ್ಟಾರೆ ಕನ್ನಡ ನಾಡು, ನುಡಿ, ನೆಲ, ಜಲ, ಜನ ಭಾಷೆ, ಸಾಹಿತ್ಯ ಈ ಎಲ್ಲವುಗಳ ಹಿತಚಿಂತನೆಯೊಂದೆ ನಮ್ಮ ಮೊದಲ ಮತ್ತು ಕೊನೆಯ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಕೆಲ ಕೃತಿಗಳನ್ನು ಪ್ರಕಟಿಸಲಾಗಿದೆ.

ಬಹುಮುಖ್ಯವಾಗಿ ಸ್ಥಳೀಯ ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಮೊದಲಾದ ಸಾಂಸ್ಕೃತಿಕ ಸಂಗತಿಗಳನ್ನು ರಚನಾತ್ಮಕವಾಗಿ ಕಟ್ಟುವಲ್ಲಿ ಅನೇಕ ಮಹನೀಯರ ಪರಿಶ್ರಮವಿದೆ. ಸಮಾಜೋಸಾಂಸ್ಕೃತಿಕ ಏಳಿಗೆಗೆಗಾಗಿ ತಮ್ಮನ್ನು ಗಂಧದ ಕೊರಡಂತೆ ಸವೆಸಿಕೊಂಡಿದ್ದಾರೆ. ಅಂಥವರ ಜೀವನ ಸಾಧನೆ ಕಾಲಗರ್ಭದಲ್ಲಿ ಮರೆಯಾಗದೆ ಒಂದು ಸಾಂಸ್ಕೃತಿಕ ದಾಖಲೆಯಾಗಬೇಕೆಂಬ ಸದಾಶಯದಿಂದ ಕನ್ನಡ ಕಟ್ಟಿದವರು ಮಾಲಿಕೆ ಆರಂಭಿಸಲಾಗಿದೆ. ಇದು ಚಾರಿತ್ರಿಕವಾಗಿ ಮಹತ್ವದ ಯೋಜನೆಯಾಗಿದೆ.

ನಮ್ಮ ಮಧ್ಯದ ಉದಯೋನ್ಮುಖ ಸಾಹಿತಿಗಳಾದ ಶ್ರೀ ನಿಂಗದಳ್ಳಿ ಮಲ್ಲಿಕಾರ್ಜುನ ಅವರು ಬರೆದ ಕುಂಚ ಕಲೆಯ ಸಂತ – ಶ್ರೀ ಚ.ಭೀ. ಸೋಮಶೆಟ್ಟಿ ಜೀವನ ಸಾಧನೆ ಎಂಬ ಪುಸ್ತಕ ಪ್ರಕಟಿಸಲು ಹೆಮ್ಮೆ, ಸಂತೋಷವೆನಿಸುತ್ತದೆ. ಶ್ರೀ ಚ.ಭೀ. ಸೋಮಶೆಟ್ಟಿ ಅವರು ಕಲಾ ಲೋಕದಲ್ಲಿ ಬಹುದೊಡ್ಡ ಕ್ರಾಂತಿ ಮಾಡಿರುವರು. ಬಸವ ತತ್ವವನ್ನು ನಿಜಾಚರಣೆಯಲ್ಲಿ ತಂದ ಶ್ರೀಯುತರ ಬದುಕು ಬರಹ ಕುರಿತ ಚಿಂತನೆ ಮಾಡುವುದು, ಅದನ್ನು ಪುಸ್ತಕ ರೂಪದಲ್ಲಿ ಹೊರತರುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯವೆಂದು ಭಾವಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ಕೈಂಕರ್ಯ ಪೂರೈಸುತ್ತಿದೆ. ಆದ್ದರಿಂದ ಸಹೃದಯರು ಸಹಸ್ಪಂದಿಸಿ ಈ ಪುಸ್ತಕ ಓದುವ ಮೂಲಕ ಅಕ್ಷರ ಪ್ರೀತಿ ಮೆರೆದರೆ ಪರಿಷತ್ತಿನ ಶ್ರಮ ಸಾರ್ಥಕವೆಂದು ಭಾವಿಸಲಾಗಿದೆ.

ಸುರೇಶ ಚನಶೆಟ್ಟಿ
ಅಧ್ಯಕ್ಷರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೀದರ